ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಸಭಾಧ್ಯಕ್ಷರೆ, ನಾವೇನು ಊಟಕ್ಕೆ ಹೋಗುವುದಿಲ್ಲ. ಬೇರೆಯವರೆಲ್ಲಾ ಊಟಕ್ಕೆ ಹೋಗಬೇಕಾಗುತ್ತದೆ. ಹಾಗಾಗಿ ಅವರಿಗೆ ಏಕೆ ತೊಂದರೆ ಕೊಡುತ್ತೀರಿ? ನನ್ನದೇನೂ objection ಇಲ್ಲ.

ಅಧ್ಯಕ್ಷರು : ಮೂರೂವರೆಗೆ adjourn ಮಾಡೋಣ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ಈ ರೀತಿ ಬಿಲ್ ಗಳನ್ನು ಮಂಡಿಸಿದರೆ ಆಗುವುದಿಲ್ಲ. ಯಾವುದೂ ಇಲ್ಲ, ಏನೂ ಇಲ್ಲ, ಮಧ್ಯಾಹ್ನಕ್ಕೆ ತಗೋಳೋಣ ಅಂದರೆ ಅರ್ಥ ಇಲ್ಲ. ಚರ್ಚೆ ಆಗದೇ ಯಾವುದೇ ಕಾರಣಕ್ಕೂ ಪಾಸ್ ಮಾಡುವುದಕ್ಕೆ ಆಗುವುದಿಲ್ಲ. ದಯಮಾಡಿ ಸಭೆಯನ್ನು ಮುಂದಕ್ಕೆ ಹಾಕಿ.

ಶ್ರೀ ಕೃಷ್ಣ ಭೈರೇಗೌಡ : ಚರ್ಚೆಗೆ ದಯವಿಟ್ಟು ಅವಕಾಶ ಮಾಡಿಕೊಡಿ. ದಯವಿಟ್ಟು ಬಿಲ್‌ಗಳ ಕಾಪಿಗಳನ್ನು ಕೊಡಿಸಿ.

ಆ) ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

1. ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕ, 2012

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, Karnataka Professional Education Institutions (Regulation of Admission on Fixation of Fees) Bill, 2012ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ದಯಮಾಡಿ ಊಟಕ್ಕೆ ಹೋಗಬೇಕಾಗಿದೆ, ಸಭೆಯನ್ನು ಮುಂದಕ್ಕೆ ಹಾಕಿ.

ಶ್ರೀ ಕೃಷ್ಣ ಭೈರೇಗೌಡ : ದಯವಿಟ್ಟು ಬಿಲ್‌ಗಳ ಕಾಪಿಗಳನ್ನು ಕೊಡಿಸಿ. ಏನು ಮಾತನಾಡುತ್ತಿದ್ದರೆ ಒಂದೂ ಗೊತ್ತಾಗುತ್ತಿಲ್ಲ. ಇಲ್ಲಿ Membersಗೆ ಕಾಪಿ ಕೊಡುತ್ತಿಲ್ಲ.

ಅಧ್ಯಕ್ಷರು : ಕಾಪಿ ಕೊಡಿ ಅವರಿಗೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೆ,

ಅಧ್ಯಕ್ಷರು : ಒಂದು ಸಣ್ಣ ಬಿಲ್ ಅಷ್ಟೇ, ಎಲ್ಲಾ ಡಾಕ್ಟರ್ಸ್‌ಗಳನ್ನು ಗ್ರಾಮೀಣ ಪ್ರದೇಶಗಳಿಗೆ compulsory ಯಾಗಿ ಕಳುಹಿಸುವಂಥ ಬಿಲ್.

ಶ್ರೀ ಎಸ್. ಸುರೇಶ್ ಕುಮಾರ್ : ಅದಲ್ಲ, ಕಳೆದ 3 ವರ್ಷಗಳಿಂದ ಒಂದು consensual agreement ನಾವು ಮಾಡಿಕೊಂಡು ಬಂದಿದ್ದೇವೆ. ಆ consensual agreementನ್ನು ಈ ವರ್ಷನೂ ಕೂಡಾ ಮುಂದುವರೆಸುವುದಕ್ಕೆ ಈ Professional courses and for other matters as provided in the judgment of the Supreme Court of India in Inamdar v/s Others ನಾವು ಕಳೆದ 2008–09, 2009–10 ಮತ್ತು 2010–11ರಲ್ಲಿ ನಾವು ಮಂಡಿಸಿಕೊಂಡು ಬಂದಿದ್ದೇವೆ. We have entered into some consensual agreement and ಈ ವರ್ಷ ಕೂಡಾ 2012–13 ರಲ್ಲಿ ಅದನ್ನು ಮುಂದುವರೆಸುವುದಕ್ಕೋಸ್ಕರ ಈ ಬಿಲ್ಲನ್ನು ತಂದಿದ್ದೇವೆ.

ಶ್ರೀ ಡಿ.ಕೆ. ಶಿವಕುಮಾರ್ : ಚರ್ಚೆ ಮಾಡೋಣ.

ಶ್ರೀ ಎಸ್. ಸುರೇಶ್ ಕುಮಾರ್ : ಚರ್ಚೆ ಮಾಡಿ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಬಹುಶಃ ಹಿಂದೆ ನಮ್ಮ ಸಿಇಟಿ ಅಂದರೆ ದೊಡ್ಡ ಮಾದರಿ, ಇವತ್ತು professional colleges ನಮ್ಮ ಇಡೀ ರಾಜ್ಯದಲ್ಲಿ ಅತಿ ಹೆಚ್ಚು ಕಾಲೇಜುಗಳನ್ನು ಕರ್ನಾಟಕ ರಾಜ್ಯ ಪಡೆದುಕೊಂಡು ಬಂದಿದೆ. ಬೇರೆ ರಾಜ್ಯಗಳಿಗೆ ನಮ್ಮಲ್ಲಿ ನಡೆಯುತ್ತಿರುವಂಥ ಅನೇಕ ಸಿಇಟಿ ಬಹಳ ಮಾದರಿಯಾಗಿ ಬೇರೆ ರಾಜ್ಯದವರೂ ಕೂಡಾ ನಮ್ಮನ್ನು ಗಮನದಲ್ಲಿ ಇಟ್ಟುಕೊಂಡಿದ್ದಾರೆ. ಇದು Pai judgment ಅಥವಾ ಇನಾಂದಾರ್ judgment? Whether it is Pai judgment or Inamdar judgment?

ಶ್ರೀ ಎಸ್. ಸುರೇಶ್ ಕುಮಾರ್ : ಇನಾಂದಾರ್ judgment.

ಶ್ರೀ ಡಿ.ಕೆ. ಶಿವಕುಮಾರ್ : ಇನಾಂದಾರ್ judgmentನ್ನು ನಾನೂ ಕೂಡ ಗಮನಿಸಿದ್ದೇನೆ. ನಿನ್ನೆ ಬಹುಶಃ ಸರ್ಕಾರ ಒಂದು ಹಂತಕ್ಕೆ professional colleges agreement ಮಾಡಿಕೊಂಡಿದ್ದಾರೆ, ಆ ಪ್ರಕಾರ ಹೋಗುತ್ತಿದೆ., fees fixation ಬಗ್ಗೆ ಏನು ಬಂದಿದೆ, ವಾಸ್ತವಿಕಕ್ಕೂ ಫೀಸ್‌ಗೂ ಬಹಳ ವ್ಯತ್ಯಾಸವಿದೆ. ಉದಾಹರಣೆಗೆ ಒಂದು ಸರ್ಕಾರಿ ಮೆಡಿಕಲ್ ಕಾಲೇಜ್‌ನಲ್ಲಿ ರೂ.5 ಲಕ್ಷ ಕಡಿಮೆ ಸರ್ಕಾರಕ್ಕೆ ಬೀಳುತ್ತಿಲ್ಲ. ಸರ್ಕಾರದ

ಇಂಜಿನಿಯರಿಂಗ್ ಕಾಲೇಜಿನಲ್ಲಿ ಕೂಡ ರೂ.1 ಲಕ್ಷ 37 ಸಾವಿರ ಬೀಳುತ್ತಿದೆ. ರೂ.40 ಸಾವಿರಕ್ಕೆ ರೂ.50 ಸಾವಿರಕ್ಕೆ ಸೀಟ್ ಕೊಡಬೇಕೆಂದು ಹೇಳಿ ಒತ್ತಾಯ ಮಾಡುತ್ತಿದ್ದಾರೆ. ಅದೇ ರೀತಿ ಪ್ರೈಮರಿ ಎಜುಕೇಷನ್‌ಗೂ ಕೂಡ, ಸರ್ಕಾರಿ ಕಾಲೇಜಿನಲ್ಲಿ ಮಕ್ಕಳನ್ನು ಓದಿಸಬೇಕಾದರೆ 30 ರಿಂದ 37 ಸಾವಿರ ಸರ್ಕಾರಕ್ಕೆ ಬೀಳುತ್ತಿದೆ. ತಮಗೆ ನಾನು request ಮಾಡುವುದು, ಈ fees fixation ಸಂದರ್ಭದಲ್ಲಿ ತಾವು ತಮ್ಮ ಸರ್ಕಾರದ ಕಾಲೇಜಿಗೆ ಏನು ಬೀಳುತ್ತಿದೆ, ಅದನ್ನು ಕೂಡ Private aided collegeಗಳಿಗೆ fix ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಇಲ್ಲ ಎಂದರೆ ಏನಾಗುತ್ತದೆಂದರೆ, donation ಮತ್ತೊಂದು ಬೇರೆ ರೀತಿಯಲ್ಲಿ ನಾವೇ ಅವರಿಗೆ ದಾರಿ ಮಾಡಿಕೊಟ್ಟಂತೆ ಆಗುತ್ತದೆ. ತಾವು ಈಗಾಗಲೇ ತಮ್ಮಲ್ಲಿ ಒಂದು report ಇದೆ, ಸರ್ಕಾರದ ಕಾಲೇಜುಗಳಿಗೆ ಎಷ್ಟು ಖರ್ಚಾಗುತ್ತಿದೆ? Private collegeಗಳಿಗೆ ಎಷ್ಟು ಖರ್ಚಾಗುತ್ತಿದೆ? ಅದನ್ನು ಬಿಟ್ಟು ವಾಸ್ತವಾಂಶ ಬಿಟ್ಟು, ಬರೀ ಬೇರೆ ಬೇರೆ ದೃಷ್ಟಿ ಇಟ್ಟುಕೊಂಡು, professional colleges ನಡೆಸುವವರು, ಇಂಜಿನಿಯರಿಂಗ್ ಕಾಲೇಜ್ ನಡೆಸುವವರು medical College ನಡೆಸುವವರು ಇವರೊಂದು ದೊಡ್ಡ ಮಾಫಿಯಾ, ದೊಡ್ಡ ಗುಂಪು, ದೊಡ್ಡ ಕಳ್ಳರು ಎನ್ನುವ ದೃಷ್ಟಿಯಿಂದ ಬಹಳ ಜನ ಇದನ್ನು ನೋಡುತ್ತಿದ್ದಾರೆ. ಇದನ್ನು ಬಿಟ್ಟು, ವಾಸ್ತವಾಂಶವನ್ನು ಬಿಟ್ಟು ಸರ್ಕಾರಕ್ಕೆ ಎಷ್ಟು ಖರ್ಚಾಗುತ್ತಿದೆ, ಅಷ್ಟನ್ನು ನೀವು private institutionsಗೂ ಕೂಡ fix ಮಾಡುವುದಕ್ಕೆ ತಾವು ಅನುವು ಮಾಡಿಕೊಡಬೇಕೆಂದು ತಮ್ಮನ್ನು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೇ, ಈ ಒಂದು ಬಿಲ್ ಕಳೆದ 2008–09, 2009–10. . . .

ಅಧ್ಯಕ್ಷರು : ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್‌ರವರೇ ಮಾತನಾಡಿ.

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಇಲ್ಲಿ fixation of fees ಎನ್ನುವ ಒಂದು ಬಿಲ್‌ನ್ನು ತಂದಿದ್ದೀರಿ, ಈಗಾಗಲೇ ನೀವು agreement ಮಾಡಿಕೊಂಡಿದ್ದಾರೆ ಎನ್ನುವುದು ನನ್ನ ಪ್ರಶ್ನೆ. As per the consensual agreement ಏನು ಇಲ್ಲಿ ಹೇಳುತ್ತಿದ್ದೀರಿ, Whether the

Government already has undergone agreement with the professional institutes? or a yet to undergone any agreement, we want clarifications regarding this. ಏಕೆಂದರೆ ಈಗ ನೀವು already if your have undergone an agreement, then you should have declared what is the amount. ಏನು fix ಮಾಡಿದ್ದೀರಿ ಎನ್ನುವುದನ್ನು ಹೇಳಬೇಕಾಗಿತ್ತು.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಡಿ.ಕೆ. ಶಿವಕುಮಾರ್‌ರವರು ಹೇಳಿದ್ದಾರೆ, ವಾಸ್ತವಿಕ ಒಂದು ಆಧಾರದ ಮೇಲೆ ನಾವು ಚರ್ಚೆ ಮಾಡಬೇಕು. It includes both seat sharing & fee fixation ತಾವು ಹೇಳಿದ ಹಾಗೆ ಇದು ಯಾವುದೂ ಕೂಡಾ agreement ಆಗಿಲ್ಲ. we are proposing, ನಾವು agreement ಮಾಡಿಕೊಳ್ಳುವುದಕ್ಕೆ ಸಹಾಯಕವಾಗಿ ಈ ಬಿಲ್ಲನ್ನು ತರುತ್ತಿದ್ದೇವೆ. ನಾಳೆ ಸಂಜೆ ಈ ಕುರಿತು ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಅವರು ಮತ್ತು ಸರ್ಕಾರದ ನಡುವೆ ಮಾತುಕತೆ ನಡೆಯಲಿದೆ. ಕಳೆದ 3 ವರ್ಷದಿಂದ, ವಿಶೇಷವಾಗಿ fee ಬಗ್ಗೆ ಹೇಳಿದ್ದೀರಿ, ವಾಸ್ತವಿಕ ಆಧಾರದ ಮೇಲೆ ನಾವು ಮಾಡುತ್ತೇವೆ, ಇದರ ಜೊತೆಗೆ ನಮ್ಮ ವಿದ್ಯಾರ್ಥಿಗಳ ಕ್ಷೇಮ ಕೂಡ ಬಹಳ important, ಅವರ ಹಿತ ಕೂಡಾ ಬಹಳ important, ಅವರ ಭವಿಷ್ಯವನ್ನು ಮನಸ್ಸಿನಲ್ಲಿಟ್ಟು ಕೊಂಡು ವಾಸ್ತವಿಕ ಆಧಾರದ ಮೇಲೆ ಮಾಡುತ್ತೇವೆ. ಇನ್ನೂ ಕೂಡಾ agreement ಆಗಿಲ್ಲ. Agreement ಆಗಲಿಕ್ಕೆ ಅನುವು ಮಾಡುವುದಕ್ಕೋಸ್ಕರ ಈ ಬಿಲ್ಲನ್ನು ಮಾಡುತ್ತಿದ್ದೇವೆ.

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಅಧ್ಯಕ್ಷರೆ, ಈಗಾಗಲೇ ಕಳೆದ ವರ್ಷ, ಅದರ ಮುಂಚೆ ವರ್ಷ ನೀವು agreement ಮಾಡಿಕೊಂಡಿದ್ದೀರಿ, this is only on the basis of the agreement between the Government & the professional colleges. ನೀವು ಒಂದು ವೇಳೆ ಈಗಾಗಲೇ ಹೊಸದಾಗಿ ಏನಾದರೂ ಮಾಡುತ್ತೀದ್ದೀರಾ, since 3 years ನೀವೇ ಹೇಳಿದ ಪ್ರಕಾರ ಕಳೆದ 3 ವರ್ಷಗಳಿಂದ ನೀವು agreement ಮಾಡಿಕೊಂಡೇ ನಡೆಸಿಕೊಂಡು ಬಂದಿದ್ದೀರಿ, ಈ ಬಿಲ್ಲನ್ನು abeyance ನಲ್ಲಿಟ್ಟು you have kept this Bill in abeyance and ನೀವು agreement

ಮಾಡಿಕೊಂಡೇ ನಡೆಸಿಕೊಂಡು ಬಂದಿದ್ದೀರಿ then what is the new that you are going to do? If you have already, last year ಏನು fees fix ಮಾಡಿದೀರಿ, ಅದಕ್ಕಿಂತ ಮತ್ತೇನು ಬೇರೆ ಮಾಡುತ್ತಿದ್ದೀರಾ? Because there is a lot of ambiguity in this, there is no clarity.

ಶ್ರೀ ಎಸ್. ಸುರೇಶ್ ಕುಮಾರ್ : ಕೃಷ್ಣ ಬೈರೇಗೌಡರೇ ನೀವು ಮಾತನಾಡುತ್ತೀರಾ, ಮಾತನಾಡಿ.

ಶ್ರೀ ಕೃಷ್ಣ ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಇದರಲ್ಲಿ constitution of one Man Regulatory Committee ಅಂತ ಇದೆ. ಒಬ್ಬರು ನಿವೃತ್ತ ಕುಲಪತಿಗಳ ಅಧ್ಯಕ್ಷತೆಯಲ್ಲಿ ಫೀಯನ್ನು ನಿಗದಿ ಮಾಡುವುದು. ನಾವು ಸಾಮಾನ್ಯವಾಗಿ ಗಮನಿಸಿದ ಹಾಗೆ ಎಲ್ಲಾ ಅಧಿಕಾರವನ್ನು ಯಾವುದೇ ಒಬ್ಬ ವ್ಯಕ್ತಿಯ ಕೈಯಲ್ಲಿ ಕೊಟ್ಟಾಗ ಅದರಲ್ಲಿ ಉಪಯೋಗನೂ ಇರುವಂಥ ಸಾಧ್ಯತೆಗಳೂ ಇರುತ್ತವೆ, ಅದರಿಂದ ತೊಂದರೆಯಾಗುವ ಸಾಧ್ಯತೆಗಳೂ ಇರುತ್ತವೆ. ಬಹುಶಃ ಮೂವರೂ ವ್ಯಕ್ತಿಗಳು ಬೇರೆ ಬೇರೆ walks of life ನಿಂದ ಕೂಡಿ ಒಬ್ಬರು technical side ನಿಂದ ಆಗಬಹುದು, ಇನ್ನೊಬ್ಬರು academic side ನಿಂದ ಆಗಬಹುದು, ಮತ್ತೆ ಇನ್ನೊಬ್ಬರು Vice Chancellor ಆಗಬಹುದು, ಈ ರೀತಿಯಾಗಿ ಒಬ್ಬರ ಅಧ್ಯಕ್ಷತೆಯಲ್ಲಿ ಇನ್ನು ಇಬ್ಬರನ್ನು ಸೇರಿಸಿ ಎಲ್ಲ ವಿವಿಧ ರಂಗಗಳನ್ನು ಪ್ರತಿನಿಧಿಸತಕ್ಕಂಥವರು, ಅಂದರೆ ವಿದ್ಯಾಭ್ಯಾಸ, ಉನ್ನತ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ವಿವಿಧ ರಂಗಗಳನ್ನು ಪ್ರತಿನಿಧಿಸುವಂಥವರ 3 ಸದಸ್ಯರ ಸಮಿತಿ, ಒಬ್ಬರನ್ನು ಬೇಕಾದರೆ ಆ ಸಮಿತಿಗೆ ಅಧ್ಯಕ್ಷರನ್ನಾಗಿ ಮಾಡಿದರೆ ಇದರಲ್ಲಿ ಒಬ್ಬರ ಕೈ ಮೇಲುಗೈ ಆಗದಂತೆ ತಡೆಗಟ್ಟುವ ಅವಕಾಶಗಳು ಚೆನ್ನಾಗಿರುತ್ತವೆ. ಒಬ್ಬರಿಗೆ ಎಲ್ಲಾ ಅಧಿಕಾರ ಕೊಟ್ಟರೆ ಎಲ್ಲೋ ಒಂದು ಕಡೆ ಕೆಲವೊಂದು ಸಂದರ್ಭದಲ್ಲಿ ಅದು ದುರುಪಯೋಗ ಆಗಿರುವಂಥ ನಿದರ್ಶನಗಳು ಇವೆ. ಮತ್ತೆ ನೀವು ಯಾವುದೇ ಸ್ವಾಯತ್ತ ಸಂಸ್ಥೆ ನೋಡಿದರೆ, Election Commission ನಿಂದ ಹಿಡಿದು ನಮ್ಮ ಲೋಕಾಯುಕ್ತ ಸಂಸ್ಥೆವರೆಗೆ ನೋಡಿದರೆ ಎಲ್ಲಾ ಕಡೆನೂ ಸಹ ಮೂವರು ಇರುತ್ತಾರೆ. ಬಹುಶಃ ಇದರಲ್ಲಿಯೂ ಆ ರೀತಿಯಾಗಿ ಮಾಡಿಕೊಳ್ಳುವುದು ಸೂಕ್ತ ಎನ್ನುವಂಥ ಸಲಹೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಸರ್ಕಾರ ಒಪ್ಪಿದರೆ ಅದೇ ರೀತಿ ತಿದ್ದುಪಡಿ ಮಾಡುವುದು ಬಹುಶಃ ಒಳ್ಳೆಯದು ಎಂದು ನನ್ನ ಸಲಹೆ.

ಅಧ್ಯಕ್ಷರು : ಈಶ್ವರ ಖಂಡ್ರೆ ಯವರು.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ) : ವೃತ್ತಿ ಶಿಕ್ಷಣ ಕಾಲೇಜುಗಳಲ್ಲಿ ಶುಲ್ಕ ನಿಗದಿ ಮತ್ತು ಪ್ರವೇಶ ನಿಯಂತ್ರಣ ಸೀಟು ಹಂಚಿಕೆ ಪ್ರಮಾಣ consensual agreement ಏನು ನಡೆಯುತ್ತಿದೆ, ಇದರಲ್ಲಿಯೂ ಬರೀ ಕೆಲವೇ ಶಿಕ್ಷಣ ಸಂಸ್ಥೆಗಳಿಗೆ ಇದು ಸಹಕಾರಿಯಾಗುತ್ತಿದೆ. ಈಗ ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಆದ ಮೇಲೆ ಸಾಕಷ್ಟು ವೃತ್ತಿ ಶಿಕ್ಷಣ ಕಾಲೇಜುಗಳು ಬಂದಿವೆ. ನಮ್ಮ ರಾಜ್ಯದಲ್ಲಿ ಒಟ್ಟು 187 ಇಂಜಿನಿಯರಿಂಗ್ ಕಾಲೇಜುಗಳಿವೆ. ಇದರಲ್ಲಿ exposure ಜಾಸ್ತಿ ಇರುವ ಕಾರಣ ಬೆಂಗಳೂರು ಕಾಲೇಜುಗಳಿಗೆ ಹೆಚ್ಚು demand ಇದೆ. ಇಂತಹ ಪರಿಸ್ಥಿತಿಯಲ್ಲಿ ಏನು ಶುಲ್ಕ ನಿಗದಿ ಮಾಡುತ್ತಾರೆ ಬರೀ ಕೆಲವೇ ಸಂಸ್ಥೆಗಳ ಜೊತೆಯಲ್ಲಿ ಕುಳಿತುಕೊಂಡು ಚರ್ಚೆ ಮಾಡಿ ಮಾಡುವಂತಹುದು ನಮ್ಮ ಗಮನಕ್ಕೆ ಬರುತ್ತಿದೆ. ಇದು ಯಾವ ರೀತಿ ಪ್ರಾದೇಶಿಕ ಅಸಮತೋಲನ ಆಗುತ್ತಿದೆ, ಅದೇ ರೀತಿ ಗ್ರಾಮೀಣ ಭಾಗದಲ್ಲಿರುವ ಕಾಲೇಜುಗಳಿಗೂ ಅನ್ಯಾಯವಾಗುತ್ತಿದೆ. ನಾನು ತಮ್ಮ ಮುಖಾಂತರ ಸಚಿವರಿಗೆ ಸಲಹೆ ಮಾಡಬೇಕೆಂದಿದ್ದೇನೆ, ಮನವಿ ಮಾಡಿಬೇಕೆಂದಿದ್ದೇನೆ ಎಂದರೆ ಎಲ್ಲರಿಗೂ ಕರೆಸಿ, ಇಲ್ಲದಿದ್ದರೆ ಸರಿಸಮವಾಗಿ ಏನು Supreme Court ಹೇಳಿದೆ, ಯಾರಿಗೂ ಯಾವುದೇ ರೀತಿಯ ಕೋಟಾ ಕೊಡದೆ ಸರ್ಕಾರದ ವತಿಯಿಂದ ಮೆರಿಟ್ ಆಧಾರಿತ ಮತ್ತು ಮೀಸಲಾತಿ ಆಧಾರಿತ ಸಂಪೂರ್ಣವಾದಂತಹ ಸೀಟುಗಳನ್ನು ಭರ್ತಿ ಮಾಡುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಇಲ್ಲದಿದ್ದರೆ ಗ್ರಾಮೀಣ ಭಾಗದಲ್ಲಿರುವ ಎಲ್ಲಾ ಕಾಲೇಜುಗಳು close ಆಗಿ ಮುಂಬರುವ ದಿನಗಳಲ್ಲಿ ಸಾಕಷ್ಟು ಸಮಸ್ಯೆಗಳು ಉದ್ಭವವಾಗುತ್ತದೆಂದು ಹೇಳಬಯಸುತ್ತೇನೆ.

ಅಧ್ಯಕ್ಷರು : ನೀವು 2 ಸಲ ಮಾತನಾಡಿದಿರಲ್ಲ?

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ) : ಅಲ್ಲ ಅಧ್ಯಕ್ಷರೆ, ಆಮೇಲೆ clarify ಮಾಡುತ್ತೇನೆಂದರು. ಬೇರೆ ಬೇರೆ ಇದೆ.

ಶ್ರೀ ನಿ.ಲ ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್) : ಸನ್ಮಾನ್ಯ ಅಧ್ಯಕ್ಷರೆ, ವೃತ್ತಿ ಶಿಕ್ಷಣ ಕಾಲೇಜುಗಳಲ್ಲಿ ಶುಲ್ಕ ನಿಗದಿ ಮತ್ತು ಪ್ರವೇಶ ನಿಯಂತ್ರಣಕ್ಕೆ ಸಂಬಂಧಪಟ್ಟಂತೆ ಏನು ವಿಧೇಯಕ ಮಂಡನೆ ಆಗಿದೆ, ಅದರಲ್ಲಿ ನಾನೂ ಸಹ ಕೃಷ್ಣ ಭೈರೇಗೌಡರು ಹೇಳಿದಂತೆ ಏಕ ಸದಸ್ಯ ನಿಯಂತ್ರಕ ಸಮಿತಿ

ಖಂಡಿತವಾಗಿ ಏಕಮುಖ ಆಗುತ್ತದೆ ಹೊರತು ಇದು ಸಾಮಾನ್ಯ ಪೋಷಕರಿಗಾಗಲಿ, ಬಡ ವರ್ಗದವರಿಗೆ ಅಥವಾ ಏಕಮುಖ ವಾಗಿರುವ ಸಾಧ್ಯತೆಯಿರುವುದರಿಂದ ತ್ರಿಸದಸ್ಯರು ಬಹಳ ಅವಶ್ಯಕವಾಗಿದೆ. Technical aspect ನಲ್ಲಿ ಒಬ್ಬರು ಇರಬಹುದು. ಜನಸಾಮಾನ್ಯರನ್ನು Socio-Economic stage ಅರಿತಂತಹವರು, ಈ ರೀತಿ ಶುಲ್ಕ ನಿಗದಿ ಪಡಿಸಲು ಮೂರು ಜನ ಸದಸ್ಯರು ಬಹಳ ಅಗತ್ಯವಾಗಿ ಬೇಕು. ಬಹುಶಃ ಹಿಂದಿನ ಇತಿಹಾಸವನ್ನು ಮೆಲುಕು ಹಾಕಿ ನೋಡಿದಾಗ ಪ್ರತಿ ಸಾರಿಯೂ ಸಹ ಶುಲ್ಕು ಮತ್ತು ಪ್ರವೇಶಕ್ಕೆ ಅನುಪಾತ ಮಾಡುವಾಗ ಪ್ರವೇಶ ಸಂದರ್ಭದಲ್ಲಿ ಯಾವ ರೀತಿ emotional hijack, emotional Blackmail ಆಗುತ್ತದೆ ಎಂಬುದನ್ನು ನೋಡುತ್ತೇವೆ. ಇದು ಆಡಳಿತ ಮಂಡಳಿಗಳ ಒತ್ತಡಕ್ಕೋ, ಖಾಸಗಿ ಶಿಕ್ಷಣ ಸಂಸ್ಥೆಗಳ ಒತ್ತಡಕ್ಕೋ ಖಂಡಿತವಾಗಿಯೂ ಉನ್ನತ ಶಿಕ್ಷಣದಿಂದ ಸಾಮಾನ್ಯ ವರ್ಗ ವಂಚಿತರಾಗುತ್ತಾರೆ. ಶುಲ್ಕ ದುಬಾರಿಯಾಗಿ ಅನಿವಾರ್ಯವಾಗಿ ಪೋಷಕರು ಬಲಿಯಾಗುತ್ತಾರೆ. ದಯಮಾಡಿ ಇದನ್ನು ಸಂಕ್ಷಿಪ್ತವಾಗಿ ಮುಂದೆ ಇದರ ಬಗ್ಗೆ committee constitute ಮಾಡಿ ನಂತರ ಅದರ ಬಗ್ಗೆ ತಿಳಿಸುತ್ತೇವೆ. ಹಿಂದೆ ಯಾವ ರೀತಿ agreement ಆಗಿಲ್ಲವೆಂಬುದನ್ನು ಸನ್ಮಾನ್ಯ Parliamentary ಸಚಿವರು ಹೇಳಿದರು. ಇದು ಹಲವಾರು ಸಂಶಯಗಳಿಗೆ ಎಡೆ ಮಾಡಿಕೊಡುತ್ತದೆ. ಇದರ ಬಗ್ಗೆ ನನ್ನ ಅಭಿಪ್ರಾಯ ಏನೆಂದರೆ, ಬಹಳ ಸ್ಪಷ್ಟವೆಂದರೆ, ಇದು ಕೇವಲ ಒಂದು ಅವಕಾಶವನ್ನು ಅಥವಾ compartment ಅನ್ನು create ಮಾಡಿ ಈ ವಿಧೇಯಕದಿಂದ ಅವಕಾಶ ಕೊಡಬಾರದು. ಜನಸಾಮಾನ್ಯರನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಉನ್ನತ ಶಿಕ್ಷಣವೂ ಸಹ ಜನಸಾಮಾನ್ಯರಿಗೆ ಎಟುಕುವಂತೆ Admission for Bachelor of Technology ಗಾಗಲಿ, Engineering ಗಾಗಲಿ, Medical ಗಾಗಲಿ ಒಂದು loan ತೆಗೆದುಕೊಳ್ಳಬೇಕಾದರೆ ಎಷ್ಟು ಕಷ್ಟ ಎಂಬುದನ್ನು ಹಲವಾರು ಸಂದರ್ಭದಲ್ಲಿ ನಾವು ಎದುರಿಸಿದ್ದೇವೆ. ದಯಮಾಡಿ ವಿನಂತಿ ಮಾಡುತ್ತೇನೆ. ಸರ್ಕಾರ have-nots ಅನ್ನು ದೃಷ್ಟಿಯಲ್ಲಿಟ್ಟುಕೊಂಡು ಅದರ ಬಗ್ಗೆ ವಿಧೇಯಕ ಮಂಡನೆ ಮಾಡಬೇಕೆಂದು ಆಗ್ರಹಿಸುತ್ತೇನೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ–ಸದಲಗಾ) : ನೀವು ಈಗ ಬಿಲ್ ಏನು ತರುತ್ತಿದ್ದೀರಿ, ಇದು Medical college, Engineering

college ಗಾಗಲಿ ಈಗ ಅವರು ಸ್ವತಃ Deemed University ಮಾಡಿಕೊಂಡಿದ್ದಾರೆ ಕೇಂದ್ರ ಸರ್ಕಾರದಿಂದ ಆದೇಶ ತಂದು. ನೀವು ಈ ಬಿಲ್ ತಂದರೆ, ಇದರಿಂದ ಏನು ಉಪಯೋಗವಾಗುವುದಿಲ್ಲ.

ಶ್ರೀ ವೀರಣ್ಣ ಚಂದ್ರಶೇಖರಯ್ಯ ಚರಂತಿಮಠ : ಎಲ್ಲಾ ಸಂಸ್ಥೆಗಳೂ Deemed University ಇಲ್ಲ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಎಲ್ಲದರ ಬಗ್ಗೆ ಹೇಳುತ್ತಿಲ್ಲ.

ಶ್ರೀ ಬಿ.ಸಿ.ಪಾಟೀಲ್ : ಅಲ್ಲ, ಅವರು ಅಭಿಪ್ರಾಯವನ್ನು ವ್ಯಕ್ತಪಡಿಸಲಿ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಈಗ ಯಾವ ರೀತಿ ಎಂದರೆ, ಅವರು ಸ್ವತಃ ಒಂದು University ಮಾಡಿಕೊಂಡು, ಕೆಂಪು ಲೈಟ್ ಹಾಕಿಕೊಂಡು ತಿರುಗಾಡುತ್ತಿದ್ದಾರೆ. ತಾವೇ ಒಬ್ಬ ಉಪ ಕುಲಪತಿಯನ್ನು ನೇಮಿಸಿ, ಈ ಕಾನೂನು ತಂದು ಏನು ಉಪಯೋಗ? Deemed University ಯಿಂದ ಎಷ್ಟು ಸಂಸ್ಥೆಗಳು ಹೊರಗಿವೆ ಹೇಳಿ ನೋಡೋಣ. ತಾವು ತಂದಿರುವ ಬಿಲ್ಲನ್ನು ಕೂಲಂಕಷವಾಗಿ ವಿಚಾರ ಮಾಡಿ. ಅವರಿಗೂ ಕೂಡಾ ಅನ್ವಯಿಸುವ ಹಾಗೆ ಕೇಂದ್ರಕ್ಕೆ ಒಂದು ವರದಿಯನ್ನು ಸಲ್ಲಿಸಿ ನಿಮ್ಮ ವ್ಯಾಪ್ತಿಯಲ್ಲಿ ಬರುವ ಹಾಗೆ, ಪರೀಕ್ಷೆಯನ್ನೂ ಅವರೇ ನಡೆಸುತ್ತಾರೆ, ಎಲ್ಲವನ್ನೂ ಅವರೇ ಮಾಡುವಾಗ ನಿಮ್ಮದೇನಿದೆ? ಈ ಬಿಲ್ಲಿನಿಂದ ಏನು ಉಪಯೋಗ ಇದೆ ಹೇಳಿ. ಪಟ್ಟಣಶೆಟ್ಟಿಯವರು ಹೇಳಿದ ಹಾಗೆ ಅದರ ಹೊರಗಡೆ ಇರಬೇಕು. ಚರಂತಿಮಠ ಅವರು ಅದರಲ್ಲಿ ಇರಲಿಕ್ಕಿಲ್ಲ.

ಶ್ರೀ ವೀರಣ್ಣ ಚಂದ್ರಶೇಖರಯ್ಯ ಚರಂತಿಮಠ : ಯುಜಿಸಿ ನಿಯಮಾವಳಿಯೊಳಗೆ University Grants Commission permission ಕೊಟ್ಟಿರುವಾಗ ನಾವೇನು ಮಾಡುವುದಿದೆ. ಕೇಂದ್ರಕ್ಕೆ ಯುಜಿಸಿ ಮೇಲೆ control ಇಲ್ಲ. ನೀವು ಯುಜಿಸಿ ಯವರನ್ನೇ ಕೇಳಬೇಕು.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಅಧ್ಯಕ್ಷರೆ, ಈ ಬಿಲ್ ಏನಿದೆ ಬಹುಶಃ ಅಷ್ಟು ಹಗುರವಾಗಿ ತೆಗೆದುಕೊಳ್ಳುವ ವಿಷಯವಲ್ಲ ಇದು. ಒಂದು ವೇಳೆ ರಾಜ್ಯದಲ್ಲಿ ಈ Professional courses ನಲ್ಲಿ ನಡೆಯುತ್ತಿರುವ ಅವ್ಯವಹಾರದ ಬಗ್ಗೆ ಬಿಲ್ ತಂದಾಗ ನಾವು ಮಾತನಾಡದೆ ಹೋದರೆ ಅದು ನಮ್ಮ ಕರ್ತವ್ಯದಲ್ಲಿ ಲೋಪವಾಗುತ್ತಿದೆ ಎಂದು ನನ್ನ conscience ನನಗೆ permit ಮಾಡುತ್ತಿಲ್ಲ. ಅದಕ್ಕೆ ಹೇಳುತ್ತಿದ್ದೇನೆ. ನಾವು

ನೋಡುತ್ತಿದ್ದೇವೆ ಪದೇ ಪದೇ ಯಾವ ರೀತಿ Professional courses ನಲ್ಲಿ ನಮ್ಮ ರಾಜ್ಯದ ಮಕ್ಕಳಿಗೆ ಅನ್ಯಾಯವಾಗುತ್ತಿದೆ ಎಂದಾಗ ಅದನ್ನು ಸಹಿಸಿ ಕೊಳ್ಳುವುದಕ್ಕೆ ಆಗುತ್ತಿಲ್ಲ. ಶುಲ್ಕ ನಿಗಧಿಯಲ್ಲಿರಬಹುದು, admission process ನಲ್ಲಿರಬಹುದು, exam conduct ಮಾಡುವುದರಲ್ಲಿರಬಹುದು ಅಥವಾ seat matrix ನಲ್ಲಿರಬಹುದು ಮತ್ತು ಆ seat matrix ನ್ನು ಹಂಚುವುದರಲ್ಲಿರಬಹುದು. ಎಲ್ಲೆಲ್ಲಿ ಅವ್ಯವಹಾರ ಇಲ್ಲ ಹೇಳಿ. ಇದು ಕಾರ್ಯದರ್ಶಿಗಳು ಹಾಗೂ ಸರ್ಕಾರದ ಗಮನಕ್ಕೆ ಗೊತ್ತಿಲ್ಲವೇನು? ಮತ್ತೆ ಈ ಸರ್ಕಾರ ಯಾರ ಪರವಾಗಿದೆ ಎಂಬುದು ನಮಗೆ ಗೊತ್ತಾಗಬೇಕು. ಸರ್ಕಾರ ಖಾಸಗಿ ಸಂಸ್ಥೆಗಳನ್ನು ನಡೆಸುವವರ ಪರವಾಗಿದೆಯೇ ಅಥವಾ ಯಾರು ಕಷ್ಟ ಪಟ್ಟು ಓದಿ, ಬಡವರಿದ್ದಾರೆ ಅವರ ಪರವಾಗಿದೆಯೆ ಎಂಬ ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಬೇಕು. ಇವತ್ತು ನೀವು ಹೇಳಿದಿರಿ, Government seats ಗೆ ನೀವು C.E.T. conduct ಮಾಡುತ್ತೀರಿ ಅದನ್ನು ನಾವು ಸ್ವಾಗತ ಮಾಡುತ್ತೇನೆ. ಏಕೆಂದರೆ C.E.T. is transparent & acceptable procedure. I accept that. ಆದರೆ other than government seats ಗೆ entrance test conduct ಮಾಡ್ತೀರಿ ಯಾವುದೆಂದರೆ Comed-K ಇರಬಹುದು, ಖಾಸಗಿ ಸಂಸ್ಥೆಗಳು ನಡೆಸುವ KRLM ಪರೀಕ್ಷೆಗಳು ಇರಬಹುದು. Are they transparent? You tell me. Let the Minister say. I don't know. Who is in-charge of this department? Concerned Minister is not there. ಅದು ಪಾರದರ್ಶಕವಾಗಿ ನಡೆಯುತ್ತಿದೆಯೆ ಎಂಬುದನ್ನು ಸರ್ಕಾರ statement ಮಾಡಬೇಕು ಈ ಸದನದಲ್ಲಿ. ಏಕೆಂದರೆ ಇಂದು ಇಡೀ ರಾಜ್ಯದ ಮಕ್ಕಳು ನೋಡುತ್ತಿದ್ದಾರೆ. Comed-K is not transparent. KRLM examinations are not transparent. Out of the purview ಇದೆ ಎಂದು ಹೇಳಬಹುದು. ಯಾಕೆಂದರೆ ನಾವು seat ಹಂಚಿಕೆ ಮಾಡುವಾಗ ನೀವು ಏನು ಹೇಳುತ್ತೀರೆಂದು ನನಗೆ ಗೊತ್ತಿದೆ. ಇಲ್ಲ ನಿಮಗೆ Supreme Court ನವರೇ ಈ ರೀತಿ exam conduct ಮಾಡುವುದಕ್ಕೆ allow ಮಾಡಿದೆ ಎಂದು ಹೇಳಬಹುದು. ಆದರೆ, ಯಾವುದೇ exam conduct ಮಾಡುವುದಕ್ಕೆ ಇವತ್ತು Supreme Court direction ಕೊಟ್ಟರೂ ಕೂಡ ಅದು ಪಾರದರ್ಶಕವಾಗಿ,

ನಿಷ್ಪಕ್ಷಪಾತವಾಗಿ without any malpractice ನಿಮಗೆ ನಿಯಂತ್ರಣ ಮಾಡಲು ಆಗುವುದಿಲ್ಲವೇನು? ನೀವು ಒಂದು ಪರೀಕ್ಷಾ ಪ್ರಾಧಿಕಾರ ಮಾಡಿ. ಒಂದು ನಿಯಮಾವಳಿ ಮಾಡಿ. ಈ ರೀತಿ ನೀವು paper setting ಮಾಡಿ. ಈ ರೀತಿ ಅದನ್ನು can't you control them? Cant you oversee them? ಈ ರೀತಿ ಅವ್ಯವಹಾರ ಆಗದ ಹಾಗೆ ನೋಡಿಕೊಳ್ಳುವುದಕ್ಕೆ ಆಗುವುದಿಲ್ಲವೇನು ನಿಮಗೆ. Then what is the Government doing? ಈಗ ನೀವು ಮೊದಲೇ ಖಾಸಗಿ ಸಂಸ್ಥೆಯವರು ಹೇಳಿದ ಹಾಗೆ ಕೇಳಬೇಕು. ಯಾಕೆಂದರೆ ಅವರು ಏನು dictate ಮಾಡುತ್ತಿದ್ದಾರೆ ಅವರ ಮಾತು ಕೇಳಬೇಕು ನೀವು. ಇದು ಅನಿವಾರ್ಯ ಇದೆ. ಆದರೂ ಕೂಡ ನಿಮಗೇನು ಷೇರ್ ಸಿಗುತ್ತದೆ what I am worried is; ನಿಮಗೇನು ಷೇರ್ ಸಿಗುತ್ತದೆ ಅದು ಪ್ರಾಮಾಣಿಕವಾಗಿ ಬಡ ಹುಡುಗರಿಗೆ ಯಾರು ಕಷ್ಟ ಪಟ್ಟು ಓದುತ್ತಿದ್ದಾರೆ, ಅವರಿಗೆ ಸಿಗಬೇಕು ತಾನೆ? ಸಿಗುತ್ತಿಲ್ಲ ಅದು. ಒಂದು ವೇಳೆ Comed-K ಯಲ್ಲಿ exam ಬರೆದವರು ಇದ್ದರೂ ಕೂಡಾ ಅದರಲ್ಲೂ merit prevail ಆಗಬೇಕೆಂದು Supreme Court direction ಇದೆ. It is not. Why it is not? Because the Government has failed to protect the interest of the students. Then how can we be a silent party and silent spector here? ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ. This point has been raised in the House for the fourth time, I believe. Then why the Government is not acting on it? ಇವತ್ತು ಬಿಲ್ಲನ್ನು ತಂದಿದ್ದೀರಿ, ನಾನು ಅನಿವಾರ್ಯವಾಗಿ ಈ ಸತ್ಯಾಂಶವನ್ನು ಹೇಳಬೇಕಾಗುತ್ತದೆ. ಈಗ ನೀವು Deemed University ವಿಚಾರ ಹೇಳಿದಿರಿ, ಅದನ್ನು ನೋಡೋಣ. ಏಕೆಂದರೆ Deemed University ಬಗ್ಗೆ UGC ಯವರು ಆ ರೀತಿ ಕೊಟ್ಟಿದ್ದಾರೆಂದರೆ ಅದಕ್ಕೂ ಕೂಡ ನೀವು ನಿಯಂತ್ರಣ ಹಾಕಬಹುದು. ಆಯಿತು. Deemed University, let them conduct their own exams. But that exams should be over-looked by you. ನೀವು ಎಕ್ಸಾಮ್ಸ್ ಅನ್ನು ಕಂಡಕ್ಟ್ ಮಾಡಿ. ಎಕ್ಸಾಮ್ಸ್ ನಿಷ್ಪಕ್ಷವಾಗಿ ನಡೆಯಲಿ. ಆ exams fixed exams ಮಾಡಿದರೆ ಪರವಾಗಿಲ್ಲ. ಅವ್ಯವಹಾರ ಇಲ್ಲಿಗೇ ನಿಲ್ಲುವುದಿಲ್ಲ. Seat matrix allot ಆಗುತ್ತದೆ. ಯಾವ ರೀತಿ seat matrix allot ಆಗುತ್ತದೆ?

ನಮ್ಮ merit students ಗೆ ಯಾವ ರೀತಿ ಅಲಾಟ್ ಆಗುತ್ತದೆ? ಯಾವಾಗ ಅಂದರೆ unimportant subjects ಅಲಾಟ್ ಆಗುತ್ತದೆ. Para-clinical, ಯಾವುದು clinical seats ಇವತ್ತು 50% ಯಾವ ಅನುಪಾತ ಇದೆ, ಆ ಅನುಪಾತದಲ್ಲಿ seat matrix allot ಆಗುವುದಿಲ್ಲ. ಮೆರಿಟ್‌ನಲ್ಲಿ ಬರತಕ್ಕಂತಹ ನಮ್ಮ ಮಕ್ಕಳಿಗೆ clinical subjects ಸಿಗುವುದಿಲ್ಲ. ಎಲ್ಲಾ Private Institutions ನವರು seat exchange ಮಾಡಿಕೊಳ್ಳುತ್ತಾರೆ. ಇವತ್ತು Paediatrics seats ಬೇಕಿದ್ದರೆ ಒಂದು Pathology seat ಕೊಟ್ಟು ಒಂದು Paediatrics seat ತೆಗೆದುಕೊಳ್ಳುವುದು.

ಶ್ರೀ ವೀರಣ್ಣ ಸಿ ಚರಂತಿ ಮಠ್ : ಡಾ: ಅದು ನಿಮ್ಮ ಕಾಲದಲ್ಲಿತ್ತು. Paediatrics seats ತೆಗೆದುಕೊಳ್ಳುವಾಗ Pathology seat ಕೊಡುವುದು ನಿಮ್ಮ ಕಾಲದಲ್ಲಿತ್ತು.

(ಗೊಂದಲ)

ಅಧ್ಯಕ್ಷರು : ಮಾನ್ಯ ಚರಂತಿ ಮಠ್ ಅವರೇ ಕುಳಿತುಕೊಳ್ಳಿ. Please ಕುಳಿತುಕೊಳ್ಳಿ.

(ಗೊಂದಲ)

Dr. SHARAN PRAKASH RUDRAPPA PATIL : I have to tell this, because he is not Piloting the Bill. You tell me. You clarify whether he is pilotinfg the Bill? I do want to say, because he should not speak.

ಶ್ರೀ ವೀರಣ್ಣ ಸಿ ಚರಂತಿ ಮಠ್ : ಪಾಯಿಂಟ್ ಇದ್ದುದನ್ನು ಹೇಳಬೇಕಾಗುತ್ತದೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ನಾನು ನಿಮ್ಮ institutions ಮೇಲೆ ಆರೋಪ ಮಾಡುತ್ತಿಲ್ಲ.

ಒಬ್ಬ ಮಾನ್ಯ ಸದಸ್ಯರು : ಯಾವುದೋ management ಒತ್ತಾಯದ ಮೇರೆಗೆ ಮಾತನಾಡುತ್ತಿದ್ದಾರೆ.

Dr. SHARAN PRAKASH RUDRAPPA PATIL : I am wrong, I am ready to face the punishment. ಒಂದು ವೇಳೆ ನಾನು ಸುಳ್ಳು ಮಾತನಾಡುತ್ತಿದ್ದರೆ, I am ready to face any punishment

which the House gives to me. Seat matrix ನಲ್ಲಿ ಪ್ರತಿವರ್ಷ ಅವ್ಯವಹಾರ ಆಗುತ್ತದೆ. Seat matrix allot ಆಗುತ್ತದೆ, ಮತ್ತೆ ಛೇಂಜ್ ಆಗುತ್ತದೆ. Who is alloting the seat matrix? ಅದು ಅಷ್ಟೇ ಅಲ್ಲ, ಇದು ಇಲ್ಲಿಗೇ ನಿಲ್ಲುವುದಿಲ್ಲ. ಏಕೆಂದರೆ ನಾನು ಬಹಳ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇದು ಇಲ್ಲಿಗೇ ನಿಲ್ಲುವುದಿಲ್ಲ. ಇವತ್ತೇನು ಮಾಡುತ್ತಿದ್ದಾರೆಂದರೆ ಕೆಲವೊಂದು ಜನರು ಏನು ಮಾಡುತ್ತಾರೆ? ಯಾವುದೋ ಒಂದು ಬುದ್ದಿವಂತ ಹುಡುಗರನ್ನು ಬೇರೆ ಬೇರೆ ರಾಜ್ಯದಿಂದ ಅವರನ್ನು ಕರೆದು ಕೊಂಡು ಬಂದು ಇಲ್ಲಿ ಎಕ್ಸಮ್ ಬರೆಸುತ್ತಾರೆ. ಎಕ್ಸಾಮ್ ಬರೆಸಿ ಈ ಕಾಮೆಡ್-ಕೆ ನಲ್ಲಿ ಮೆರಿಟ್ ಪ್ರಕಾರ ಅವರಿಗೆ ಸೀಟ್ ಅಲಾಟ್ ಆಗುತ್ತದೆ. ಅದಾದ ಮೇಲೆ ಈ ರೀತಿ ರಾಜ್ಯದಲ್ಲಿ ತನಿಖೆ ನಡೆಯಬೇಕು. ಯಾರಿಗೆ ಕಾಮೆಡ್-ಕೆ ನಲ್ಲಿ ಸೀಟ್ ಅಲಾಟ್ ಆಗಿದೆ? ಎಷ್ಟು ಜನ ಸೀಟು ತೆಗೆದುಕೊಂಡು ಎಂ.ಡಿ. ಮಾಡುತ್ತಿದ್ದಾರೆನ್ನುವುದು ಇವತ್ತು ನೋಡಬೇಕು. ಯಾರೋ ಮಾಡುತ್ತಿಲ್ಲ. ಏಕೆಂದರೆ ಅವರೆಲ್ಲಾ ಸೀಟು ತೆಗೆದುಕೊಂಡು management ಗೆ ಸರಂಡರ್ ಮಾಡಿ ಬಿಡುತ್ತಾರೆ. Managementನವರು ತಮಗೆ ಬೇಕಾದವರಿಗೆ ಮಾರಿಕೊಂಡು ಬಿಡುತ್ತಾರೆ. ಈ ರಾಜ್ಯದಲ್ಲಿ ಅವ್ಯವಹಾರ ಆಗಿದೆ. ಯಾರೂ ಕೇಳುವವರು ಇಲ್ಲವಾ ಈ ರಾಜ್ಯದಲ್ಲಿ? ಸರ್ಕಾರ ಏನು ಮಾಡುತ್ತಿದೆ? ನಾನು ಈ ಸರ್ಕಾರ ಎಂದು ಹೇಳುವುದಿಲ್ಲ. ಯಾವುದೇ ಸರ್ಕಾರ ತಪ್ಪು ಮಾಡುತ್ತಿದೆ. ಇದನ್ನು ಸರಿಪಡಿಸಲಿ ಎಂದು ನಾನು ಪದೇ ಪದೇ ಸದನದಲ್ಲಿ ಹೇಳುತ್ತಿದ್ದೇನೆ. If they are not going to protect the interest of our students, our children, then what are we here for? ಮಾನ್ಯ ಅಧ್ಯಕ್ಷರೆ, ಬಹಳ ನೋವಿನಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಈ ಪ್ರೈವೇಟ್ ಸಂಸ್ಥೆ ನಡೆಸುವವರು ನಮ್ಮ ಕಡೆ ಇರಬಹುದು, ಆ ಕಡೆ ಇರಬಹುದು. I am not bothered. I do not represent them. I represent a Government student of this state and I am pained to say that definitely they have been cheated by the Government and Government has to set it right. I can not tolerate this nonsense. And let the Government clarify about this.

ಅಧ್ಯಕ್ಷರು : ಮಾನ್ಯ ಮಂಜು ಅವರು ಮಾತನಾಡಲಿ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : Medical college ನಲ್ಲಿ ಎಷ್ಟು ಮಕ್ಕಳು ಇವತ್ತು MBBS seat ಅಥವಾ Engineering seat ನಲ್ಲಿ ಕಲಿಯುತ್ತಿದ್ದಾರೆ, ಅದರ ಒಂದು ಲಿಸ್ಟ್ ತರಿಸಿ ನೋಡಿ. ಅಲ್ಲಿ ಪರಿಸ್ಥಿತಿ ನೋಡಿ. ಒಬ್ಬನೇ ಒಬ್ಬ ಬಡ ವಿದ್ಯಾರ್ಥಿ ಇವತ್ತು ಅಲ್ಲಿ ಎಂಬಿಬಿಎಸ್ ಅಥವಾ ಇಂಜಿನಿಯರಿಂಗ್ ಕಲಿಯುತ್ತಿದ್ದಾನಾ ಬೇಕಾದರೆ ನೋಡಿ. ಆ ಡೈರೆಕ್ಟರ್ ಮಕ್ಕಳು, ಆ ಪ್ರಿನ್ಸಿಪಾಲ್ ಮಕ್ಕಳು, ಎಂಡಿ ಮಕ್ಕಳು ಅವರೇ ಪ್ರವೇಶ ತೆಗೆದುಕೊಂಡಿದ್ದಾರೆ. ಅವರೇ ಅಲ್ಲಿ ಪೇಪರ್ ಬರೆಸುತ್ತಾರೆ. ಅವರೇ ಪೇಪರ್ ಬರೆಸಿ ಮೆರಿಟ್ ಮೇಲೆ ತಂದ ಹಾಗೆ ಮಾಡಿ ಅಲ್ಲಿ ಪ್ರವೇಶ ಕೊಡುತ್ತಾರೆ. ದಯವಿಟ್ಟು ನೀವು ಇದನ್ನು ಒಪ್ಪಿಗೆ ತೆಗೆದುಕೊಳ್ಳುವುದಾದರೆ ಮೊದಲು ಅಲ್ಲಿ enquiry ಮಾಡಿಸಿ. ಖಾಸಗಿ ಮೆಡಿಕಲ್ ಕಾಲೇಜಿನಲ್ಲಿ ಏನೇನಾಗಿದೆ ಎಂದು enquiry ಮಾಡಿಸಿ ಆಮೇಲೆ ಬಿಲ್ ತೆಗೆದುಕೊಂಡು ಬನ್ನಿ.

ಶ್ರೀ ಎ. ಮಂಜು (ಅರಕಲಗೂಡು) : ಮಾನ್ಯ ಅಧ್ಯಕ್ಷರೆ, ಈಗ ಈ ಬಿಲ್ಲಿನ ಬಗ್ಗೆ ಈಗಾಗಲೇ ನಮ್ಮ ಡಾ: ಶರಣ ಪ್ರಕಾಶ್ ಅವರು ತಮ್ಮ ವಾದ ಮಂಡಿಸಿರತಕ್ಕ ಬಗ್ಗೆ ನನ್ನ ಸಹಮತ ಇದೆ. ನಾನು ಒಬ್ಬ ಕಾಲೇಜಿನ ಮ್ಯಾನೇಜ್‌ಮೆಂಟ್‌ನಲ್ಲಿ ಇರುವುದನ್ನು ಮಾನ್ಯ ಮಂತ್ರಿಗಳು ಒಪ್ಪಿಕೊಳ್ಳುತ್ತಾರೆಂದು ಅನಿಸುತ್ತದೆ. ಮೊನ್ನೆ ತಾನೇ ಪಿಯುಸಿ ಪರೀಕ್ಷೆಯ ಅವ್ಯವಹಾರ ನಡೆದಾಗ ಅದರಲ್ಲಿ ಸುಮಾರು ಅಧಿಕಾರಿಗಳು ಭಾಗಿ ಆಗಿದ್ದಾರೆ, ಅವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂಬ ಒತ್ತಾಯ ಇದ್ದಾಗಲೂ ಅವರ ಮೇಲೆ ಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ ಎಂದರೆ ನಮ್ಮ ಮಾನ್ಯ ಶಾಸಕ ಮಿತ್ರರು ಹೇಳಿದ ಹಾಗೆ ಸರ್ಕಾರದ ಬದ್ಧತೆ ಇಲ್ಲಿರಬೇಕು. ನಾವು ಈ ಬಡ ಮಕ್ಕಳಿಗೆ ಸಿಗುವಂತಹ ವ್ಯವಸ್ಥೆಯಲ್ಲಿ ನಿಜವಾದಂತಹ ಪರೀಕ್ಷೆಗಳನ್ನು ಮಾಡಿ ಉತ್ತೀರ್ಣರಾದವರಿಗೆ ಸಿಗುವಂತಹ ವ್ಯವಸ್ಥೆ ಆದಾಗ ಮಾತ್ರ ನಿಜವಾದಂತಹ meritstudents ಗೆ ಅವಕಾಶ ಸಿಗುತ್ತದೆ. ಅದನ್ನು ಬಿಟ್ಟು ಮ್ಯಾನೇಜ್‌ಮೆಂಟ್‌ನವರು ಕಾಮೆಡ್-ಕೆ ಪರೀಕ್ಷೆ ಏನು ನಡೆಸುತ್ತಾರೆ, ಸರ್ಕಾರ ಅವರ ಹಿಡಿತಕ್ಕೆ ಕೊಟ್ಟಿರುವಂತದ್ದು, ಇವರು ಹೇಳತಕ್ಕದ್ದು ನೂರಕ್ಕೆ ನೂರು ಸತ್ಯ. Examinations ಅನ್ನು ಆ ಕಾಲೇಜಿನವರೇ ಜಾಕಿ ಮುಖಾಂತರ ಪರೀಕ್ಷೆಯನ್ನು ಬರೆಸುತ್ತಾರೆ. Marks ಅನ್ನು ಕೊಡುವ ಮುಖಾಂತರ, ಮೊದಲೇ ಇಂತಹವರಿಗೆ ಸೀಟು ಸಿಕ್ಕಿದೆ ಎಂದು ಸೀಟು ಬುಕ್ ಆಗಿರುತ್ತದೆ. Examinations ಕೊನೆಗೆ ಆಗುತ್ತದೆ.

Collection ಆದಮೇಲೆ result announce ಮಾಡುತ್ತಾರೆ. ಅಂದರೆ ಇದು ವ್ಯವಸ್ಥಿತವಾದಂತಹ ಜಾಲ ನಡೆಯುತ್ತಿರತಕ್ಕದ್ದು. It is a racket, I think ಟಿ.ವಿ.ಯಲ್ಲಿ ಎಲ್ಲಾ ನೋಡಿದ್ದೇವೆ. ಸುಮಾರು ಜನ ಇದರ ಹಿನ್ನೆಲೆ ಹೊಂದಿರತಕ್ಕವರು ಎಲ್ಲರೂ ಕೂಡ ಜೈಲಿನಲ್ಲಿ ಇದ್ದಂತಹದನ್ನು ನಾವು ಈಗ ಮೊನ್ನೆ ತಾನೇ ನೋಡಿದ್ದೇವೆ. ಈ ಬಿಲ್ಲನ್ನು ತಂದಿರತಕ್ಕದ್ದನ್ನು ನೋಡಿದರೆ ಸಂಶಯ ಆಗುತ್ತಿದೆ. ನೀವು ಅವರಿಗೆ ಎನ್‌ಕರೇಜ್ ಮಾಡುವುದಕ್ಕೆ ಈ ಬಿಲ್ ಬಂದಿದೆಯೇನೋ ಎಂದು ಸಂಶಯ. ಇದು ನಿಯಂತ್ರಣ ಆಗಬೇಕು. ಏತಕ್ಕೆ ಇವೆಲ್ಲಾ ಆಗುವುದಿಲ್ಲ ಎಂದು ಹೇಳಿದರೆ ಡಾಕ್ಟರ್ ಅವರು ಮಾತನಾಡ ಬೇಕಾದಾಗ ಹೇಳಿದರು. ಎಲ್ಲರಿಗೂ ಹೊಟ್ಟೆಉರಿ. ನಿಜ, ಈ ವ್ಯತ್ಯಾಸ ಮಾಡಿಕೊಂಡಿರತಕ್ಕ ಕ್ಲಿನಿಕಲ್ ಸೀಟನ್ನು ಬದಲಾವಣೆ ಮಾಡಿಕೊಂಡು ಬರತಕ್ಕಂತಹದ್ದು ಇದೆ. ಇವತ್ತು ನನ್ನ ಮಾಹಿತಿ ಪ್ರಕಾರ ನಿನ್ನೆಯ ದಿವಸ ಒಂದೇ ಕಾಲೇಜಿಗೆ 4 paediatric seats ಅನ್ನು ಬದಲಾವಣೆ ಮಾಡಿಕೊಟ್ಟಿದ್ದಾರೆ. ಕೇಳಿದರೆ ಕೇಂದ್ರ ಸರ್ಕಾರ ಮಾಡಿ ಕೊಡುತ್ತಾರೆ ಎಂಸಿಐ ಮಾಡಿಕೊಡುತ್ತಾರೆ ಎಂದು ನೀವು ಹೇಳಿದಿರಿ. ಅವರು ಸರ್ಕಾರದಿಂದ ನಿಮ್ಮ recommendaton ಆಗಿ ಹೋದರೆ ಮಾತ್ರ ಮಾಡಿಕೊಡುವುದು. ಇಲ್ಲದಿದ್ದರೆ ಮಾಡಿಕೊಡುವುದಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದ ನಿಮಗೆ ಇಚ್ಛಾಶಕ್ತಿ ಇರಬೇಕು. ಮಾನ್ಯ ಸುರೇಶ್‌ಕುಮಾರ್ ಎನ್ನುವಂತಹವರು ಬಿಲ್ಲನ್ನು ತಂದಿದ್ದೀರಿ. ನಿಮಗೆ ಒಂದು ಒಳ್ಳೆಯ ಅವಕಾಶ ಇದೆ. ಇನ್ನು ಮೇಲಾದರೂ ಸರಿಯಾಗಿ ಮಾಡಬೇಕು. ಏಕೆಂದರೆ ನಾನೂ ಸಹ ಸಿಂಡಿಕೇಟ್ ಸದಸ್ಯನಾಗಿ ನೋಡಿದ್ದೇನೆ. ಮೊನ್ನೆಯ ದಿವಸ ರಾಜೀವ್ ಗಾಂಧಿ ವಿಶ್ವವಿದ್ಯಾಲಯದ ಮೀಟಿಂಗ್‌ನಲ್ಲಿ ಪ್ರಸ್ತಾಪ ಮಾಡಿದೆ. COD ನಲ್ಲಿ ಇರತಕ್ಕವರನ್ನು ಈಗಾಗಲೇ reinstate ಮಾಡಿರತಕ್ಕದ್ದನ್ನು ನಾನು ನೋಡಿದ್ದೇನೆ. ಏತಕ್ಕೆ COD ಯಲ್ಲಿದ್ದ ವರನ್ನು reinstate ಮಾಡುತ್ತೀರಿ? ಉದಾಹರಣೆಗೆ ಎಲ್ಲಾ ಕಾಲೇಜಿನವರದ್ದು ಪೇಪರಿನಲ್ಲಿ ಬಂದಿರತಕ್ಕದ್ದು. ಈಗ ಎಷ್ಟೋ ಕಾಲೇಜಿನಲ್ಲಿ ಸೀರಿಯಸ್ ಆಗಿ ತೆಗೆದುಕೊಂಡರೆ ಮ್ಯಾನೇಜ್‌ಮೆಂಟ್‌ನವರೇ ದಂಧೆ ನಡೆಸುತ್ತಿರತಕ್ಕದ್ದನ್ನು ನೋಡಿದರೆ ಮ್ಯಾನೇಜ್‌ಮೆಂಟ್ ಮೇಲೆ ಸರ್ಕಾರದ ನಿಯಂತ್ರಣ ಇಲ್ಲ. ನಾಳೆ ನೀವು ಮೀಟಿಂಗ್ ಕರೆದಿರತಕ್ಕದ್ದು. ಈಗ ಹೊಸದಾಗಿ ಮಾನ್ಯ ಮುಖ್ಯ ಮಂತ್ರಿಗಳು ಬಂದಿದ್ದಾರೆ. ಅವರ ಮೇಲೆ ಹೇಳಿದರೆ ಪಾಪ ತಪ್ಪಾಗುತ್ತದೆ. ಅವರಿಗೆ ಇನ್ನೂ ಮೊದಲನೆಯ ಮೀಟಿಂಗ್. ಅವರು ಬಂದು 8

ತಿಂಗಳಾಗಿದೆ, 9ನೇ ತಿಂಗಳಿಗೆ ಹೋಗುವಂತಹ ಸಮಯ. ಈಗ ನೀವೇನು ಮಾಡುತ್ತೀರಿ? ಇವರನ್ನೆಲ್ಲಾ ಮಿಟಿಂಗ್‌ಗೆ ಕರೆಸಿ ಅವರ ಮೇಲೆ ಗೂಬೆ ಕೂರಿಸುವ ಒಂದು ತಂತ್ರವನ್ನು ನೀವು ಮಾಡುತ್ತೀರಿ. ಈಗ Private Management Meeting ಕರೆಯುವುದಿಲ್ಲವಾ? ಸೀಟು ಹಂಚಿಕೆ ಮಾಡಿಕೊಳ್ಳುವುದರಲ್ಲಿ ಯಾರು ಎಷ್ಟು ಸೀಟನ್ನು ಸರ್ಕಾರದ ಪರವಾಗಿ ಕೊಡುತ್ತಾರೆನ್ನುವುದೇ ಮೊದಲಿನಿಂದ ಮಾಡಿಕೊಂಡು ಬಂದಿರುವುದು. ಅದು ಆಗಬಾರದು ಎಂದು ನಮ್ಮ ಮನವಿ. ನಿಜವಾಗಲೂ ಇದನ್ನು ಕರೆಕ್ಟ್ ಆಗಿ ಏನಾದರೂ ಮಾಡಿಕೊಳ್ಳುವುದಾದರೆ ಈಗ ಹಗರಣಗಳು ಟಿ.ವಿ.ಯಲ್ಲಿ ಬಂದಿರತಕ್ಕದ್ದನ್ನು, ಅದರ ಬಗ್ಗೆ ಸರ್ಕಾರ ಕ್ರಮವನ್ನೇ ತೆಗೆದುಕೊಂಡಿಲ್ಲ. ಜೈಲಿಗೆ ಹೋಗಿದ್ದಾರೆ, ಜೈಲಿನಿಂದ ಬೇಲ್ ತೆಗೆದುಕೊಂಡಿದ್ದಾರೆ. ಅದರ ಬಗ್ಗೆ ಸರ್ಕಾರ ಕಣ್ಣು ಮುಚ್ಚಿಕೊಂಡು ಕುಳಿತಿದೆ ಎಂದು ನನ್ನ ಒಂದು ಭಾವನೆ. ತಾವೇನು ಈ ಒಂದು ವಿಧೇಯಕ ತಂದಿದ್ದೀರಿ, ಇದು ನಿಜವಾಗಲೂ ಕೂಡ ಬಡವರ ಪರ ಆಗುವುದಿಲ್ಲ. ಇದು ನೀವು ಏನು ಮಾಡುತ್ತಿದ್ದೀರಿ? ಯಾರೋ ಸೀಟುಗಳನ್ನು ನಿಮಗೆ ಬೇಕಾದವರಿಗೆ ಹಂಚಿಕೆ ಮಾಡಿಕೊಳ್ಳಲು ಮಾಡುತ್ತಿರುವ ವಿಧೇಯಕ ಅನ್ನುವುದನ್ನು ನೇರವಾಗಿ ಹೇಳಬೇಕಾಗುತ್ತದೆ.

ಡಾ: ಎಂ.ಸಿ ಸುಧಾಕರ್ (ಚಿಂತಾಮಣಿ) : ಮಾನ್ಯ ಸಭಾಧ್ಯಕ್ಷರೆ, ಈಗ ಚರ್ಚೆ ಮಾಡಿದಂತಹ ಹಲವಾರು ವಿಚಾರದಲ್ಲಿ ಈಗ ಏನಾಗಿದೆ ಎಂದರೆ ಸೀಟು ಸರೆಂಡರ್ ಮಾಡತಕ್ಕದ್ದರ ಬಗ್ಗೆ ವಿಷಯ ಹೇಳಿದ್ದಾರೆ. ಒಂದು Post Graduation ಬಗ್ಗೆ ಡಾ: ಶರಣ ಪ್ರಕಾಶ್ ಅವರು ಹೇಳಿರತಕ್ಕಂತಹದು ಹಿಂದೆ ಆ ರೀತಿ ಆಗುತ್ತಿತ್ತು. ನಂತರ ಅದನ್ನು rotation system ಮಾಡಿರತಕ್ಕದ್ದು, ಸುಮಾರು ಎರಡು ಮೂರು ವರ್ಷದಿಂದ rotation system post graduation seat ನಲ್ಲಿ ಆಗಿದೆ. ಅವರು ಹೇಳಿದ ಹಾಗೆ non-clinical subject ಕೊಡತಕ್ಕದ್ದು, clinical subject ಅನ್ನು auction ಮುಖಾಂತರ ಒಂದು ಕೋಟಿ, ಒಂದೂವರೆ ಕೋಟಿ, ಎರಡು ಕೋಟಿ, ಯಾರು highest bidding ಮಾಡುತ್ತಾರೆ, ಅವರಿಗೆ ಕೊಡುವಂತಹ ಪದ್ಧತಿಯನ್ನು ನಡೆಸಿ ಕೊಂಡು ಬರುತ್ತಿದ್ದಾರೆ. ಇವತ್ತೂ ಆ ಪದ್ಧತಿಯನ್ನು ಜಾರಿಯಲ್ಲಿಟ್ಟು ಕೊಂಡಿದ್ದಾರೆ.

ಮುಖ್ಯವಾಗಿ ಇನ್ನೊಂದು ವಿಚಾರ. ಇವತ್ತು ಕೆಲವು ಬುದ್ಧಿವಂತ ಹುಡುಗರು regular ಆಗಿ ಬಂದು ಪ್ರತಿ ವರ್ಷ CET exam ಬರೆಯುತ್ತಾರೆ. ಒಳ್ಳೆಯ ಕಾಲೇಜಿನಲ್ಲಿ ಸೀಟು ಸಿಕ್ಕಿರುವುದನ್ನು last day, admission closing day ಏನಿರುತ್ತದೋ, ಆ ದಿನದವರೆಗೆ ಅವರು admission ಆಗುವುದಿಲ್ಲ. ಅವತ್ತು ಅವನು 'ನನಗೆ ಈ ಸೀಟು ಬೇಡ' ಎಂದು ಕೈ ಬಿಡುತ್ತಾನೆ. ಆಗ ಆ ಸೀಟನ್ನು managementಗೆ surrender ಮಾಡತಕ್ಕದ್ದು ನಡೆಯುತ್ತಿದೆ. ಕೆಲವು ತಿಂಗಳ ಹಿಂದೆ ನಮ್ಮ ಸುದ್ದಿ ವಾಹಿನಿಯೊಂದರಲ್ಲಿ 'Sting Operation' ವೊಂದನ್ನು ನಡೆಸಿದರು. ಅದನ್ನು ಸರ್ಕಾರ ಬಹಳ ಗಂಭಿರವಾಗಿ ತೆಗೆದುಕೊಳ್ಳಬೇಕಾಗಿತ್ತು. ಒಂದೆರೆಡು ಸಂಸ್ಥೆ ಬಗ್ಗೆ ಅವತ್ತು ಪ್ರಸಾರವಾಗಿತ್ತು, ಇನ್ನೂ ಎಷ್ಟು ಸಂಸ್ಥೆಗಳು ಈ ರೀತಿ ಮಾಡಿವೆ, ಯಾವ್ಯಾವ ವರ್ಷದಲ್ಲಿ ಕಡೇ ಗಳಿಗೆಯಲ್ಲಿ, admission cut-off date ಏನಿರುತ್ತದೋ, ಆ cut-off date ಸಂದರ್ಭದಲ್ಲಿ ಎಷ್ಟು surrender ಆಗಿರುತ್ತವೋ, ಅದನ್ನು ತೆಗೆಯಬೇಕಾಗುತ್ತದೆ. ಆಮೇಲೆ, repeated ಆಗಿ CET ಪರೀಕ್ಷೆಗೆ ಕೂರತ ಕ್ಕಂಥ ವಿದ್ಯಾರ್ಥಿಗಳು, ಯಾರು official ಆಗಿ ಬಂದು, ಈ ದಂಧೆಯಲ್ಲಿ ಪಾಲ್ಗೊಂಡಿರುತ್ತಾರೋ, ಅವರನ್ನು ಪತ್ತೆ ಹಚ್ಚಬೇಕಾಗುತ್ತದೆ. ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಂಡು, ಬಹಳ ಸಮಗ್ರವಾಗಿ ಇದನ್ನು ತನಿಖೆ ಮಾಡಿಸುವುದಾದರೆ, ಬಹುಶಃ ಬಹಳಷ್ಟು ಜನ ಬಡವರು ಇವತ್ತು 'Q' ನಲ್ಲಿ ನಿಂತಿರತಕ್ಕವರು, ಲಕ್ಷಾಂತರ ರೂಪಾಯಿಗಳನ್ನು ಕೊಡುವುದಕ್ಕೆ ಕಷ್ಟವಿರುವವರಿಗೆ ಅನುಕೂಲ ಮಾಡತಕ್ಕ ಕೆಲಸವಾಗುತ್ತದೆ. ಇನ್ನು Deemed University ಗಳ ಬಗ್ಗೆ ಹೇಳುವುದಾದರೆ, ಈಗಾಗಲೇ ಕೆಂದ್ರ ಸರ್ಕಾರ ಈ ಬಗ್ಗೆ ಗಮನಹರಿಸಿದೆ. ಈ Deemed University ಯಲ್ಲಿ ಬಹಳಷ್ಟು ವ್ಯತ್ಯಾಸಗಳಿವೆ, ಇವುಗಳನ್ನು UGC ಯಾವ ಉದ್ದೇಶದಿಂದ ಸ್ಥಾಪಿಸಲಿಕ್ಕೆ ಅನುಮತಿ ಕೊಟ್ಟಿತ್ತೋ, ಆ ಪ್ರಕಾರ ಅವುಗಳು ನಡೆಯುತ್ತಿಲ್ಲ ಎನ್ನುವುದು ಕೇಂದ್ರದ ಗಮನಕ್ಕೆ ತಂದು, ಈಗಾಗಲೇ ಕೇಂದ್ರ ಮಾನ್ಯ Human Resources ಮಂತ್ರಿಗಳು ಈ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆ. ಇದರ ವಿರುದ್ಧ ಅವರು ಕೋರ್ಟಿಗೆ ಹೋಗಿದ್ದಾರೆ. ಅದನ್ನು cancel ಮಾಡಬೇಕು ಅಥವಾ Deemed University ಮಾಡಿಕೊಟ್ಟಿರತಕ್ಕದ್ದನ್ನು review

ಮಾಡಬೇಕು ಎನ್ನತಕ್ಕ ಕೇಂದ್ರ ಸರ್ಕಾರದ ಒಂದು ತಿರ್ಮಾನ ಏನಿದೆ, ಬಹುಶಃ ರಾಜ್ಯ ಸರ್ಕಾರವೂ ಅದಕ್ಕೆ ಕೆಂದ್ರದೊಂದಿಗೆ ಕೈಜೋಡಿಸಬೇಕಾಗುತ್ತದೆ. ಆ application ನಲ್ಲಿ ಸರ್ಕಾರ implead ಆಗಬಹುದೇ, ಎಂಬುದನ್ನು ನೋಡಬೇಕಾಗುತ್ತದೆ. ಏಕೆಂದರೆ, ನಮ್ಮ Government seats substantially reduce ಆಗಿದೆ. ಮಾನ್ಯ ಮಂಜುರವರು ಮತ್ತು ಇತರ ಸದಸ್ಯರು ಹೇಳಿದಂತೆ, it's all pre-determined and rigged. ಸುಮ್ಮನೆ ಕಾಟಾಚಾರಕ್ಕೆ ಅಥವಾ formality ಗೆ examinations ಮಾಡುತ್ತಿದ್ದಾರೆ. ಇದು ಬಹಳ ಮುಖ್ಯವಾಗಿ ನಾವು ಗಮನಿಸಬೇಕಾದುದು. ಇದು ನಮ್ಮೆಲ್ಲರಿಗೂ ಬಹಳ ನೋವು ತಂದಿರತಕ್ಕದ್ದಾಗಿದೆ. ನಾವೆಲ್ಲಾ professionals ಆಗಿ ಇವತ್ತು ರಾಜಕಾರಣಕ್ಕೆ ಬಂದಿರತಕ್ಕವರಾಗಿದ್ದೇವೆ. ನಾವೆಲ್ಲಾ ಆ ಕಷ್ಟಗಳನ್ನು ನೋಡಿಕೊಂಡು ಬಂದಿದ್ದೇವೆ. ಆದ್ದರಿಂದ, ದಯವಿಟ್ಟು ಇವತ್ತು ಮುಂದೆ ಈ ರೀತಿ ಆಗದೆ ಇರುವುದಕ್ಕೆ ಸರ್ಕಾರ ಗಂಭೀರವಾಗಿ ಕ್ರಮ ತೆಗೆದುಕೊಳ್ಳಬೇಕು. One-Man Regulatory Committee ಎಂದೇನು ಹೇಳಿದ್ದೀರಿ, ಅದು ಸರಿಯಲ್ಲ. ಒಬ್ಬ ವ್ಯಕ್ತಿ ಇದ್ದರೆ, ಅದು ಒಳ್ಳೆಯರೀತಿಯಲ್ಲಿ ಆಗಬಹುದು ಅಥವಾ ಬಹಳ ಅನಾಹುತವೂ ಸಹಾ ಆಗಬಹುದು. ಆದ್ದರಿಂದ ದಯವಿಟ್ಟು ಒಬ್ಬ ವ್ಯಕ್ತಿ ಸಮಿತಿ ಬೇಡ. Election Commission ನಲ್ಲಿ ಇವತ್ತು majority decisions ಆಗಲಿ ಎಂದು ಮೂವರು commissioners ಮಾಡಿದ್ದಾರೆ. ದಯವಿಟ್ಟು ಇದರ ಬಗ್ಗೆ ತಾವು ಗಂಭೀರವಾಗಿ ತೆಗೆದುಕೊಳ್ಳಬೇಕು. ಇದುವರೆಗೂ ಏನೋ ಒಂದು consensus ಆಗಿ ಮಾಡುತ್ತಿದ್ದೀರಿ. ಬಹಳಷ್ಟು ಸಲ ಸರ್ಕಾರವನ್ನು ಆಡಳಿತ ಮಂಡಳಿಗಳು ಇಕ್ಕಟ್ಟಿಗೆ ಸಿಲುಕಿಸುತ್ತಿರುವ ಹಲವಾರು ಸನ್ನಿವೇಶಗಳನ್ನು ನಾವು ನೋಡಿದ್ದೇವೆ. ಬಹಳಷ್ಟು ಸಂದರ್ಭದಲ್ಲಿ ಸರ್ಕಾರವೇ ಅವರಿಗೆ ಬಗ್ಗಿ 5% ಸೀಟು ಬಿಟ್ಟು ಕೊಡುವುದು, ಇದೆಲ್ಲಾ ಆಗಿದೆ. ಮೊನ್ನೆ global recession ಆದಾಗ, engineering seats ಸರ್ಕಾರಕ್ಕೂ ಉಳಿದು ಹೋಯಿತು, ಕಾಲೇಜಿನವರಿಗೂ ಉಳಿದು ಹೋಯಿತು. 2–3 ವರ್ಷಗಳ ಹಿಂದೆ Dental seats, ಸರ್ಕಾರದ್ದೂ ಉಳಿದು ಹೋಯಿತು, Management ನವರದ್ದೂ ಉಳಿದು ಹೋಯಿತು. Global recession ಕಡಿಮೆಯಾಗಿ, Software Company ಗಳು ಸ್ವಲ್ಪ pick up ಆದ ನಂತರ ಅಲ್ಲಿ demand

create ಆಯಿತು, ಇಲ್ಲಿ vacancies ಆಯಿತು. ಸ್ವಲ್ಪ fluctuations ಆಗುತ್ತವೆ. ಆದರೂ ಸ್ವಲ್ಪ ಏನು ಇದುವರೆಗೂ ಚರ್ಚೆಯಾಯಿತು, ದಯವಿಟ್ಟು ಈ ಬಗ್ಗೆ ಸಮಗ್ರವಾಗಿ ತನಿಖೆಗೆ ಆದೇಶ ಮಾಡಬೇಕಾಗುತ್ತದೆ, ತನಿಖೆ ಆಗಬೇಕಾ ಗುತ್ತದೆ. ಮುಂದೆ ಈ ರೀತಿ ಆಗಬಾರದು, ಇದಕ್ಕೆ ಕಡಿವಾಣ ಹಾಕುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಕನಕಪುರ) : ಮಾನ್ಯ ಅಧ್ಯಕ್ಷರೆ, ಈ ಬಿಲ್ ಬಗ್ಗೆ ನಮ್ಮದೇನೂ ತಕರಾರಿಲ್ಲ. ಆದರೆ Practical ಆಗಿ ಏನು ವಿಚಾರ ನಡೆಯುತ್ತಿದೆ ಎಂಬುದನ್ನು ನಮ್ಮ 3–4 members ಮಾತನಾಡುತ್ತಾ ತಿಳಿಸಿದ್ದಾರೆ. ಮಾನ್ಯ ಸುಧಾಕರ್‌ರವರು ಮಾತನಾಡಿರುವುದು ಇರಬಹುದು, ಮಾನ್ಯ ಮಂಜುರವರು ಮಾತನಾಡಿರುವುದು ಇರಬಹುದು, ಮಾನ್ಯ ಶರಣ ಪ್ರಕಾಶ್ ಪಾಟೀಲ್‌ರವರು ಮಾತನಾಡಿರುವುದು ಇರಬಹುದು, ಎಲ್ಲವೂ ಸರಿಯಿದೆ. ಇದು ಇಲ್ಲಿ ಒಂದು ದೊಡ್ಡ ವ್ಯವಸ್ಥಿತ ದಂಧೆಯಾಗಿದೆ. ಈ ಬಗ್ಗೆ Calling Attention notice ಒಂದನ್ನು ಕೊಟ್ಟಿದ್ದೆ. ಆ Calling Attention ಇಲ್ಲಿ ಬಂದಿಲ್ಲ. ಇದು ಹೇಗೆ ಎಂದರೆ, ಒಂದು ಕಡೆ ಜಾಕಿ ಕೂರಿಸಿ ಬರೆಸುವಂತಾದ್ದು, ಇನ್ನೊಂದು ಕಡೆ last day ವರೆಗೂ admission ಮಾಡಿಕೊಳ್ಳದೇ ಇರುವುದು. last day ವರೆಗೂ ಬಿಟ್ಟು ಬೇರೆ ಒಬ್ಬ merit student ಕೈಯಲ್ಲಿ ಬರೆಸಿ, ತಿರುಗಿ ಅವನು ಬೇಡ ಎಂದು ಹೇಳುವುದು, ಆ ಸೀಟನ್ನು management ನವರು ತುಂಬಿಕೊಳ್ಳುವುದು. last day ಆಗಿದೆ, ಒಂದು ದಿನ ಏನು ಮಾಡುವುದು ಎಂದು ಅವರೇ ಆ ಸೀಟನ್ನು fill up ಮಾಡಿಕೊಳ್ಳುವುದು ನಡೆಯುತ್ತಿದೆ. ಇದು ವ್ಯಾಪಕವಾಗಿ ನಡೆಯುತ್ತಿದೆ. ಪ್ರತಿ institution ನಲ್ಲೂ ಕೂಡ 10–30 ಸೀಟುಗಳವರೆಗೂ ಇದು ನಡೆದು ಕೊಂಡು ಬರುತ್ತಿದೆ. ನಾನು ಮೊನ್ನೆ ಟಿ.ವಿ.ಯಲ್ಲಿ interview ಒಂದನ್ನು ನೋಡಿದೆ. ಆ ಜಾಲದ ಬಗ್ಗೆ ಕೇಳಿ ನನಗೆ ಗಾಬರಿಯಾಯಿತು. ನಮ್ಮ ರಾಜ್ಯದಲ್ಲಿ educational institutions ಬಗ್ಗೆ ಎಷ್ಟೊಂದು ಗೌರವವಿದೆ. ಅದರಲ್ಲೂ Medical Colleges ಬಗ್ಗೆ ಬಹಳ ಗೌರವವಿದೆ. The highest number of doctors produced in the country is from Karnartaka. ಇಂತಹ ಕಡೆ ಇಂತಹ ಕೆಲಸ ನಡೆಯುತ್ತಿದೆಯಲ್ಲಾ, quality doctors

ಇರುವಂತಹ ಕಡೆ ಹೀಗಾಗುತ್ತಿದೆಯಲ್ಲಾ ಎಂದು ಬಹಳ ನೋವಾಯಿತು. ದಯವಿಟ್ಟು, ನೀವು ಇದನ್ನು ಪಾಸ್ ಮಾಡಿ. ನಮ್ಮದೇನೂ ಅಭ್ಯಂತರವಿಲ್ಲ. This is an agreement which COMED-K has already entered into with you. ಬೇಕಾದಷ್ಟು engineering seats ಉಳಿದುಕೊಂಡು ಬಿಟ್ಟಿದೆ. Medical seats ಎಲ್ಲೂ ಉಳಿಯುತ್ತಿಲ್ಲ. ಎಲ್ಲಾ institutions ನಲ್ಲೂ. CET seats ಉಳಿದು ಹೋಗಿದೆ ಮತ್ತು Management seats ಕೂಡ ಉಳಿದು ಹೋಗಿದೆ. But, ನಮ್ಮ ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೋ, ಇದರ ಬಗ್ಗೆ ಸರ್ಕಾರ ಗಮನ ಹರಿಸಿ, ಇಂತಹ ಮಾಡಬಾರದನ್ನೆಲ್ಲಾ ಮಾಡುತ್ತಿರುವ ಆ management ಗಳಿಗೆ administrators ಗಳನ್ನು ಹಾಕಬೇಕು. Institutions ಮಾಡಿರುವುದು ಏತಕ್ಕಾಗಿ? Service ಗೋಸ್ಕರ. Capitation fee ಒಂದರಿಂದಲೇ ಎಲ್ಲಾ problems sort out ಆಗುವುದಕ್ಕೆ ಸಾಧ್ಯವಿಲ್ಲ. ನಿಜ, ಸಂಸ್ಥೆ ನಡೆಯಬೇಕು, infrastructure ಬರಬೇಕು, ಮತ್ತೊಂದು ಬರಬೇಕು. ಆದರೆ ಈ ರೀತಿ ನಿಜವಾದ ಮಕ್ಕಳಿದ್ದಾರಲ್ಲಾ, ಆ ಮಕ್ಕಳಿಗೆ ಈ ರೀತಿ ಮಾಡಿಬಿಟ್ಟು, ಬೇರೆಯವರಿಗೆ ತೊಂದರೆ ಮಾಡುವಂತಾದ್ದು ಏನಿದೆ, ಇದು ಸರಿಯಲ್ಲ. ಎಲ್ಲಾ ಇದರಲ್ಲಿ ತಗುಲಿ ಹಾಕಿಕೊಂಡಿದ್ದಾರೆ. ಮಠಗಳು ಇರಬಹುದು, ಇನ್ನೊಬ್ಬರು ಇರಬಹುದು, ನನ್ನದೇ institutions ಇರಬಹುದು. ಮೊದಲು ಇದನ್ನು ನಿಯಂತ್ರಣ ಮಾಡಲಿಕ್ಕೆ ಕ್ರಮ ಜರುಗಿಸಿ. ಅವರು ಹೇಳುತ್ತಿರುವ ಸಲಹೆಗಳು ಬಹಳ correct ಆಗಿದೆ. ಇದಕ್ಕಾಗಿ ಮೊದಲು All-party Legislator's Committee ಯೊಂದನ್ನು ನೀವು ರಚಿಸಿ. ನಿಮ್ಮದೇ ಅಧ್ಯಕ್ಷತೆಯಲ್ಲಿ ಅದನ್ನು ರಚಿಸಿ. ಇತರ ಮೆಂಬರ್ಸ್ ಅನ್ನು ಅದಕ್ಕೆ ಹಾಕಿಕೊಳ್ಳಿ. Then you take up a report on this. ಇವರನ್ನು control ಗೆ ತೆಗೆದುಕೊಳ್ಳದಿದ್ದರೆ ಬಹಳ ಕಷ್ಟವಾಗುತ್ತದೆ. ಇದು ಲಾಬಿ ಎನ್ನುವ ಪ್ರಶ್ನೆಯಲ್ಲ. ಇದೊಂದು ದೊಡ್ಡ ವಿಚಾರವಾಗಿದೆ. Please, ದಯವಿಟ್ಟು ಇದಕ್ಕೆ ಒಂದು House Committee ಯನ್ನು ತಾವು form ಮಾಡಿ. ನಾವು House Committee ಗೆ information ಕೊಡುತ್ತೇವೆ. Then you come out. Let the Law Minister head that Committee. ಅವರನ್ನು ಮಾಡಿ, ಇವರನ್ನು ಮಾಡಿ ಎನ್ನುವ ಬದಲು ಮಾನ್ಯ Law Minister ರವರೇ

ಕಮಿಟಿಯನ್ನು ಹೆಡ್ ಮಾಡಲಿ ಅಥವಾ Education Minister ರವರೇ ಹೆಡ್ ಮಾಡಲಿ. ವಾಸ್ತವಾಂಶ ಏನು ನಡೆಯುತ್ತಿದೆ ಎಂಬುದು ಎಲ್ಲರಿಗೂ ಗೊತ್ತಾಗಲಿ. Mass copying ನಡೆಯುತ್ತಿದೆ. ಎಲ್ಲಾ institution ಗಳಲ್ಲಿ ಒಳ್ಳೆಯ percentage ಬರಲಿ ಎಂದು ಸಂಬಂಧಪಟ್ಟ institutions ನವರೇ mass copying ಗೆ ಅವಕಾಶ ಮಾಡಿಕೊಡುತ್ತಿದ್ದಾರೆ. ತನ್ಮೂಲಕ ವಿದ್ಯಾರ್ಥಿಗಳು 80%–90% ಅಂಕಗಳನ್ನು ಗಳಿಸಿಕೊಳ್ಳುತ್ತಿದ್ದಾರೆ. ಅವರಲ್ಲಿ ಕೆಲವರಿಗೆ ತಲೆ ಸೀಳಿದರೂ ಮೂರು ಅಕ್ಷರ ಬರುವುದಿಲ್ಲ. ಕೆಲವು institutions ನಲ್ಲಿ ಇರುವ ಅಂತಹವರೂ ಸಹಾ 90% ತೆಗೆದು ಕೊಳ್ಳುತ್ತಿದ್ದಾರೆ. ಇದೆಲ್ಲಾ ನಡೆದುಕೊಂಡು ಬರುತ್ತಿದೆ. ಇವತ್ತು ನಮ್ಮ ರಾಜ್ಯದ ಬಗ್ಗೆ ಒಬಾಮಾ ಏಕೆ ಹೆದರಿಕೊಳ್ಳುತ್ತಿದ್ದಾರೆ? The human resource what Karnataka has, the man power that Karnataka has, what Bangalore has ಅದಕ್ಕೋಸ್ಕರ ಅವರು ಹೆದರುತ್ತಿದ್ದಾರೆ. ಹೀಗಿರುವಂತಹ ಸಂದರ್ಭದಲ್ಲಿ, ಈ ಮೊದಲಿನಿಂದ ನಮ್ಮ ಹಿರಿಯರು ಏನೊಂದು ಕಾಪಾಡಿಕೊಂಡು ಬಂದಿದ್ದಾರೋ, ಅದನ್ನು ಉಳಿಸಿಕೊಂಡು ಹೋಗೋಣ. ಇದೊಂದು ದಂಧೆಯನ್ನು ನಿಯಂತ್ರಣ ಮಾಡಲಿಕ್ಕೆ ದಯವಿಟ್ಟು House Committee ಯೊಂದರ ರಚನೆಯನ್ನು announce ಮಾಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ಈ ಬಿಲ್ ಪಾಸ್ ಮಾಡಬಾರದು.

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ, ಈಗ ಡಾಕ್ಟರ್‌ರವರು ಮಾತನಾಡುತ್ತಾರೆ. ನೀವು ಈಗಾಗಲೇ ಸಾಕಷ್ಟು ಮಾತನಾಡಿದ್ದೀರಿ. ಮತ್ತೆ ಮತ್ತೆ ಮಾತನಾಡಲು ಎದ್ದು ನಿಂತರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ : ನೀವು ಈಗಾಗಲೇ ಮಾತನಾಡಿ ಮಸೂದೆಯನ್ನು ವಿರೋಧ ಮಾಡಿದ್ದೀರಿ. ಮಾನ್ಯ ಸಚಿವರು ಉತ್ತರ ಹೇಳಿದ ಮೇಲೆ ಇನ್ನೇನಾದರೂ ಇದ್ದರೆ ಕೇಳಿ. ಈಗ ಕುಳಿತುಕೊಳ್ಳಿ.

ಅಧ್ಯಕ್ಷರು : Please ಕುಳಿತುಕೊಳ್ಳಿ. ಡಾಕ್ಟರ್‌ರವರೆ, ತಾವು ಮಾತನಾಡಿ.

ಶ್ರೀ ಎ.ಬಿ. ಮಾಲಕರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ಸರ್ಕಾರ ಈ ಹಿಂದೆ ಕೂಡ ಈ ರೀತಿ ಮಾಡಿದೆ. ಪ್ರತಿ ವರ್ಷ admission time ನಲ್ಲಿ ಈ ರೀತಿ ಸರ್ಕಾರ GO ಮೂಲಕ issue ಮಾಡೇ ಮಾಡುತ್ತಾರೆ. ಆದರೆ mischief ಎಲ್ಲಿ ಆಗುತ್ತಿದೆ? ಸರ್ಕಾರದ ಮಟ್ಟದಲ್ಲಿ ಆಗುತ್ತಿಲ್ಲ. Mischief ಎಲ್ಲಿ ಆಗುತ್ತಿದೆ ಎಂದರೆ, ಸುಪ್ರೀಂ ಕೋರ್ಟ್ 10th time ಏನು judgement issue ಮಾಡುತ್ತಿದ್ದಾರೋ, ಅಲ್ಲಿ ಸ್ವಲ್ಪ lacuna ಬಂದಿದೆ. ಏನು ಬಂದಿದೆ ಎಂಬ ಬಗ್ಗೆ ಇವರು ಹೇಳಿದರು. Last moment ನಲ್ಲಿ seat surrender ಮಾಡುತ್ತಾರೆ ಆಮೇಲೆ ಆ ಸೀಟನ್ನು ಮಾರಾಟ ಮಾಡಿಕೊಂಡು ಹಣ ಮಾಡುತ್ತಾರೆ ಅಥವಾ ಯಾರೋ ಬಂದು ಪೇಪರ್ ಬರೆಯುತ್ತಾರೆ, ಬಹಳ smart ಇದ್ದವನು, ಅವನು pass ಆಗುತ್ತಾನೆ, ಅವನಿಗೆ seat ಸಿಕ್ಕಿದೆ ಎಂದು ಹೇಳುತ್ತಾರೆ. Last moment ನಲ್ಲಿ ಬಂದು seat surrender ಮಾಡುತ್ತಾನೆ, ಅದನ್ನು ವ್ಯಾಪಾರ ಮಾಡುತ್ತಾನೆ. ಅದು ಏಕೆ ಆ ರೀತಿಯಾಗುತ್ತಿದೆ? ಎಂದರೆ, ಸುಪ್ರೀಂ ಕೋರ್ಟಿನವರ ತೀರ್ಪಿನಲ್ಲಿ surrendered seats should be treated as lapsed' ಎಂದು ಹೇಳಿದ್ದರೆ, ಇದೆಲ್ಲಾ ಆಗುತ್ತಿರಲಿಲ್ಲ. ಸುಪ್ರೀಂ ಕೋರ್ಟಿನವರು, last moment seat ಏನು surrender ಮಾಡುತ್ತಾರೋ, 'the management can fill up that seat' ಎಂದು ಹೇಳಿದ್ದಾರೆ. ಆದ್ದರಿಂದ ಇಷ್ಟೆಲ್ಲಾ ತೊಂದರೆಗಳಾಗುತ್ತಿವೆ. This is No.1. ಇನ್ನು ಎರಡನೆಯದಾಗಿ, ಮಾನ್ಯ ಸದಸ್ಯರಾದ ಪ್ರಕಾಶ್ ರವರು Deemed University ಗಳ ಬಗ್ಗೆ ಹೇಳಿದರು. Deemed University ಗಳೂ ಸಹ ಸರ್ಕಾರದ control ಗೆ ಬರುವುದಿಲ್ಲ. Deemed University ಯವರೇ as per the UGC guidelines ಪರೀಕ್ಷೆಗಳನ್ನು conduct ಮಾಡುತ್ತಾರೆ. ನಿಮಗೇನೂ ಅದರಲ್ಲಿ ಅಧಿಕಾರವಿಲ್ಲ, ನಿಮಗೇನೂ authority ಇಲ್ಲ. ಅದಕ್ಕಾಗಿ ಅಲ್ಲಿ ಏನು ಆಗುತ್ತಿದೆ ಎನ್ನುವುದು ಸರ್ಕಾರಕ್ಕೆ ಗೊತ್ತಾಗುವುದಿಲ್ಲ. Because under the UGC Grants Regulation Act, they conduct the examination. ಸರ್ಕಾರ recommendation ಮಾಡಬಹುದು. ಇವರು ಈ ರೀತಿ ಮಾಡುತ್ತಿದ್ದಾರೆ, ಇಲ್ಲಿ ಈ ರೀತಿ correction ಮಾಡಿ ಎಂದು ನೀವು ಅವರಿಗೆ suggestion ಕೊಡಬಹುದು ಅಷ್ಟೆ. ಆದರೆ ಅವರು

ಸರ್ಕಾರದವರ ಕಂಟ್ರೋಲ್‌ನಲ್ಲಿ ಇಲ್ಲ. Last moment ನಲ್ಲಿ seat surrender ಮಾಡುವಂತಹ ಗದ್ದಲ ಏನಿದೆಯೋ, ಅದನ್ನು ಮತ್ತೆ ಸುಪ್ರೀಂ ಕೋರ್ಟ್‌ನವರೇ ಬಗೆಹರಿಸಬೇಕಾಗುತ್ತದೆ. ಏಕೆಂದರೆ, the management shall fill up that seat ಎಂದು ಹೇಳಿದವರು ಅವರೇ ಅಲ್ಲವೇ?

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಒಂದು ವೇಳೆ seat surrender ಆದರೂ management ನವರು ಅದನ್ನು merit ಪ್ರಕಾರ fill up ಮಾಡಬೇಕು. COMED-K ನಲ್ಲೂ merit ನವರಿಗೆ ಕೊಡಬೇಕೆಂದಿದೆ. ಅವರು merit-wise ಕೊಡುತ್ತಿಲ್ಲ, ಬೇಕಾದವರಿಗೆ ಕೊಡುತ್ತಿದ್ದಾರೆ. That is the problem.

ಡಾ: ಡಾ.ಎ.ಬಿ. ಮಾಲಕರೆಡ್ಡಿ : ಅದು ಆ ರೀತಿ ಆಗುವುದಿಲ್ಲ. Those who are eligible should be given admission. Eligibility of the candidate ನೋಡಬೇಕಲ್ಲವೇ?

Unnecessarily, the management will suffer the income for the loss of seat. The income has to be made up either by the Government or by selling the seat. It is an enormous loss to the institution. ಅಲ್ಲಿ ಆ ಪ್ರಶ್ನೆ ಬರುತ್ತದೆ. ಹಾಗೆ ರಿಟನ್ಸ್ ಮಾಡುವುದಕ್ಕೆ ಬರುವುದಿಲ್ಲ, ನೀವು ಏನು ಮಾಡುತ್ತೀರಿ? Whoever comes, he cannot me admitted next day. Same day he has to be admitted. ಅಲ್ಲಿ ಹೋಗಿ ಸರ್ಕಾರವದರು ಸೀಟು ತೆಗೆದುಕೊಂಡು ಹೋಗಿ ಕೊಡಬೇಕಾ? It has to be worked out practically. That is the difficulty.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಸದನದ ಎಲ್ಲ ಸದಸ್ಯರ ಭಾವನೆಗಳನ್ನು ತಿಳಿದುಕೊಂಡಿದ್ದೇವೆ. ಎಲ್ಲರ ಗುರಿ ಒಂದೇ, ಭಾವನೆ ಇರುವುದೇನೆಂದರೆ, ಆರ್ಥಿಕವಾಗಿ ದುರ್ಬಲರಾಗಿದ್ದರೂ ಕೂಡ ಯಾರು ಉನ್ನತ ಶಿಕ್ಷಣ ಪಡೆಯಬೇಕೆಂದಿದ್ದಾರೆ ಅವರಿಗೆ ಅನ್ಯಾಯವಾಗಬಾರದು. Higher education should be affordable and accessible transparently. ಈ ಉದ್ದೇಶದಿಂದ ಎಲ್ಲರೂ ಕೂಡ ಮಾತನಾಡಿದ್ದಾರೆ. ಈ ಸಂದರ್ಭದಲ್ಲಿ ಕೆಲವು ಆತಂಕ ಹಾಗೂ ಸಂಶಯಗಳನ್ನು ಕೂಡ

ವ್ಯಕ್ತಪಡಿಸಿದ್ದಾರೆ. ಈಗ ಸೆಕ್ಷನ್ 4 ಏತಕ್ಕೆ ಮಾಡುತ್ತಿದ್ದೇವೆಂದು ನೋಡಿದರೆ, fee structure ಗೋಸ್ಕರ ಒಂದು consensual agreement ಬರಲಿ ಎಂದು. 2011–2012ರ fee sharing formula ಬಗ್ಗೆ ಗಮನ ಸೆಳೆಯುತ್ತೇನೆ. Medical-40% Government seats. ಫೀ ನಾವು ಫಿಕ್ಸ್ ಮಾಡಿದ್ದು ರೂ.35,000. Dental-35%, ಫೀ ಪಿಕ್ಸ್ ಮಾಡಿದ್ದು ರೂ.25,000. Engineering, Architecture-45%. ಫೀ ಫಿಕ್ಸ್ ಮಾಡಿದ್ದು ರೂ.30–35,000. ಇದು seat sharing ಮತ್ತು ಫೀ ಗೆ ಸಂಬಂಧಿಸಿದ್ದು. ಕೃಷ್ಣಭೈರೇಗೌಡರು, ಡಾ: ಸುಧಾಕರ್ ಅವರು One-Man Committee ಯಿಂದ ತೊಂದರೆಯಾಗುತ್ತದೆ, Three-Man Committee ಇದ್ದರೆ ಒಳ್ಳೆಯದು ಎಂದು ಒಂದು ಮಾತನ್ನು ಹೇಳಿದರು. One-Man Committee ಕೆಲಸವೇನೆಂದು ನೋಡಬೇಕು. Agreement will be between the Government and the Management. ಸೆಕ್ಷನ್ 3 ನೋಡಿದರೆ, "There shall be a One-Man Regulatory Committee appointed by the State Government, who shall be a former Vice-Chancellor of any University in the State. The said One-Man Regulatory Committee shall oversee the admission to professional courses and the implementation of the consensual arrangement or agreement done in accordance to the provisions of this Act." ಅವರದ್ದು ಬೇರೆ ಏನೂ ರೋಲ್ ಇಲ್ಲ. He will monitor. ಅಗ್ರಿಮೆಂಟ್ ಮಾಡಿಕೊಳ್ಳುವುದು, Seat sharing, fee fixing ಎಲ್ಲಾ, Government and Management ನಡುವೆ ಆಗುತ್ತದೆ. ದಯವಿಟ್ಟು, ಆ ಆತಂಕವನ್ನು ತೆಗೆದುಕೊಳ್ಳುವುದು ಬೇಡವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. 3ನೆಯದು, ಇನಾಂದಾರ್ ಕೇಸ್ ಬಗ್ಗೆ ಎಲ್ಲಾ ಇಲ್ಲಿ ಪ್ರಸ್ತಾಪವಾಗಿದೆ. ನಿಜ ಹೇಳಬೇಕೆಂದರೆ, ಇನಾಂದಾರ್ ಕೇಸ್‌ನಲ್ಲಿ seat sharing ಬಗ್ಗೆ ಪ್ರಸ್ತಾಪವೇ ಮಾಡಿಲ್ಲ. ಅದರಿಂದ ನಮ್ಮ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ ಎನ್ನುವುದಕ್ಕೋಸ್ಕರ 2006ನೇ ಆಕ್ಟ್ ಅನ್ನು ನಾವು ತಂದೆವು. 2006ನೇ ಆಕ್ಟ್‌ನಲ್ಲಿ, Management considered that Act to be very draconian. ಆಗಿನಿಂದಲೂ ಇದನ್ನು abeyance ನಲ್ಲಿ

ಇಟ್ಟುಕೊಂಡು ಈ ರೀತಿ ಅಗ್ರಿಮೆಂಟ್ ಮಾಡಿಕೊಂಡು ಬರುತ್ತಿದ್ದೇವೆ, ಈಗಾಗಲೇ ನಾನು fee structure ಏನು ಹೇಳಿದೆ ಆ ಆಧಾರದ ಮೇಲೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕಳೆದ ಮೂರು ವರ್ಷಗಳಿಂದ ಮಾಡಿಕೊಂಡು ಬಂದಿದ್ದೇವೆ. 2011–12ರಲ್ಲಿ 14,102 Engineering seats wentt unfilled. Fee structure ಈಗಲೇ ತಾವು ನೋಡಿದಂತೆ ಬಹಳ reasonable ಇದೆ, ಇಂಜಿನಿಯರಿಂಗ್ ಅಂತು ಏನೂ ತೊಂದರೆನೇ ಇಲ್ಲ, ಮೆಡಿಕಲ್‌ದ್ದು ಕೂಡ ನೋಡಿದ್ದಿರಿ. 2011–12ರಲ್ಲಿ 9,000 Engineering seats ಅನ್ನು private management ನವರು, ನೀವು ದಯವಿಟ್ಟು ತುಂಬಿ ಎಂದು ಸರ್ಕಾರಕ್ಕೆ ಸರೆಂಡರ್ ಮಾಡಿದರು, out of their quota. ಪ್ರಕಾಶ್ ಹುಕ್ಕೇರಿಯವರು ಸೇರಿದಂತೆ ಇತರರು ಏನು ಆತಂಕ ವ್ಯಕ್ತಪಡಿಸಿದರು, ಅದು ನನಗೆ ಅರ್ಥವಾಗುತ್ತದೆ. ಆದರೆ ಇವತ್ತು, ಕಳೆದ 3 ವರ್ಷಗಳಿಂದ 2006ನೇ ಆಕ್ಟ್ ಅನ್ನು abeyance ನಲ್ಲಿಟ್ಟು ನಾವು ಮಾಡಿಕೊಂಡು ಬಂದಿದ್ದೇವೆ. ಈ ಸಂದರ್ಭದಲ್ಲಿ ನಾನು ದಿ: ಡಾ: ವಿ.ಎಸ್. ಆಚಾರ್ಯರನ್ನು ನೆನಪಿಸಿಕೊಳ್ಳುತ್ತೇನೆ. ಕಳೆದ ವರ್ಷ ಆ ಮ್ಯಾನೇಜ್‌ಮೆಂಟ್‌ಗಳ ಜೊತೆ ಮಾತನಾಡುವಾಗ, I think, nobody will have any doubt about the integrity of Dr. V.S. Acharya. ಅವರ integrity ಬಗ್ಗೆ ಯಾರಿಗೂ ಸಂಶಯ ಬರುವುದಕ್ಕೆ ಸಾಧ್ಯವಿಲ್ಲ. ಅವರು ಕೊನೆಯ ಕ್ಷಣದವರೆವಿಗೂ ಯಾವ ರೀತಿ ಫೈಟ್ ಮಾಡಿ, ಕೊನೆಗೆ ಮ್ಯಾನೆಜ್‌ಮೆಂಟ್ ಅವರು ಬರುವಂತೆ ಮಾಡಿ, consensual agreement ಮಾಡಿದ್ದರೆ. ಈ ಆಧಾರದ ಮೇಲೆ ಇವತ್ತು ನಾವು ಮಾಡುತ್ತಿದ್ದೇವೆ. ತಾವು ಏನು ಹೇಳಿದ್ದೀರಿ, ಒಂದು Legislators, Committee ಮಾಡಬೇಕು, Law Minister ರವರು head ಮಾಡಲಿ ಅಂತ, ಅದನ್ನೆಲ್ಲಾ ಡಿಟೇಲ್ ಆಗಿ ಚರ್ಚೆ ಮಾಡಿ ನಾವು ಮಾಡಿದ್ದೇವೆ. ಆದರೆ ಒಂದಂತೂ ನಿಜ, ಈ ರೀತಿ ಮ್ಯಾನೇಜ್‌ಮೆಂಟ್, ಮಾಫಿಯಾ ಎನ್ನುವ ಪದಗಳೇನು ಬರುತ್ತಿದೆ, ನನಗನಿಸುತ್ತದೆ, ಎರಡಲ್ಲೂ ನಾವು ಎಲ್ಲೋ ಮಧ್ಯದಲ್ಲಿದ್ದೇವೆ ಎಂದು ಅನಿಸುತ್ತಿದೆ. ನಾವು ಮ್ಯಾನೇಜ್‌ಮೆಂಟ್ ಅನ್ನು sweeping remarks ಮಾಡುತ್ತೇವೆ, ಮ್ಯಾನೇಜ್‌ಮೆಂಟ್ ಅವರು ವಿದ್ಯಾರ್ಥಿಗಳಿರುವುದೇ ನಮ್ಮ ಉದ್ಧಾರಕ್ಕೆಂದು ತಿಳಿದುಕೊಂಡಿದ್ದಾರೆ. ಇದರ ಮಧ್ಯೆ ನಾವು ಇವತ್ತು ಮಾಡಬೇಕು. ಒಟ್ಟಾರೆ ಈ ಬಿಲ್ಲಿನ ಉದ್ದೇಶವೇನೆಂದರೆ,

ಬಹಳ ನಮಗೆ ಹತ್ತಿರವಿರುವುದರಿಂದ, ನಮಗೆ ಅವಧಿ ಇಲ್ಲ, ಇವತ್ತು ಇದಾದ ಮೇಲೆ ಕೌನ್ಸಿಲ್‌ಗೆ ಹೋಗಬೇಕು, ಕೌನ್ಸಿಲ್‌ನಲ್ಲಿ pass ಆಗಬೇಕು. ಇದರ ಆಧಾರದ ಮೇಲೆ ನಾವು, ನಾಳೆ consensus ಗೆ ಕುಳಿತುಕೊಂಡು ಮಾಡಬೇಕು. ನಿಮ್ಮ ಎಲ್ಲಾ ಆತಂಕಗಳನ್ನು ನಾನು ಗಮನದಲ್ಲಿಟ್ಟು ಕೊಂಡು, ನೀವು ಏನೇನು ಸಲಹೆಗಳನ್ನು ಕೊಟ್ಟಿದ್ದಿರಿ ಅವನ್ನು ಕೂಡ ನೆನಪಿನಲ್ಲಿಟ್ಟು ಕೊಂಡು, ರಾಜ್ಯದಲ್ಲೇ highest number of doctors are coming out ಎಂದು ತಾವು ಹೇಳಿದಿರಿ. In fact, ಇವತ್ತು ನಮ್ಮ ರಾಜ್ಯ ಬಹಳ ಐಟಿ ಜೊತೆಗೆ ಆಗಿರುವುದು Higher Education Hub ಎಂದು. ಅದನ್ನು ಉಳಿಸಿಕೊಳ್ಳುವುದಕ್ಕೆ ಈ ಆಕ್ಟ್ ಮೂಲಕ ನಾವು ಕ್ರಮ ತೆಗೆದುಕೊಳ್ಳುತ್ತೇವೆ, ಇನ್ನೇನಾದರೂ ಸಲಹೆಗಳಿದ್ದರೆ ದಯವಿಟ್ಟು ಕೊಡಿ, ನಮ್ಮ ವಿದ್ಯಾರ್ಥಿಗಳ ರಕ್ಷಣೆ ಈ ಸದನದ ಎಲ್ಲಾ ಸದಸ್ಯರ ಜವಾಬ್ದಾರಿಯಾಗಿರುತ್ತದೆ.

ಶ್ರೀ ಕೃಷ್ಣಬೈರೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಸುದೀರ್ಘವಾಗಿ ಉತ್ತರವನ್ನು ಕೊಟ್ಟಿದ್ದಾರೆ, ಆದರೆ ಬಹುತೇಕ ಸದಸ್ಯರು ಪ್ರಮುಖವಾಗಿ ಒಂದು ವಿಚಾರವನ್ನು ಎತ್ತಿದರು, ಖಾಸಗಿ ಸಂಸ್ಥೆಯವರು ಪ್ರವೇಶ ಪರೀಕ್ಷೆಯನ್ನು ಅವರಿಗೆ ಇಷ್ಟ ಬಂದಂತೆ ಮಾನ್ಯ ಎ. ಮಂಜುರವರು ಹೇಳಿದರೆ ಮಾಡಿಕೊಂಡು, ಸೀಟುಗಳು ಮೊದಲೇ ನಿಗಧಿಯಾಗಿರುತ್ತವೆ. ಪರೀಕ್ಷೆ ಆಮೇಲೆ ನಡೆಯುತ್ತವೆ ಎನ್ನುವ ಬಹಳ ಒಂದು ಗುರುತರವಾದ ವಿಚಾರವನ್ನು ಹೇಳಿದರು. ಸರ್ಕಾರದ ಸಿಇಟಿ ಮೇಲೆ ನಮಗೆ ಸಂಪೂರ್ಣ ವಾದ ವಿಶ್ವಾಸವಿದೆ, ಸಿಇಟಿನಲ್ಲಿ ಬರ್ತಿಯಾಗುತ್ತಿರುವುದು ನಿಜ, ಅದು ಕರೆಕ್ಟ್ ಆಗಿ ನಡೆಯುತ್ತಿದೆ. ಸಾಕಷ್ಟು ಸ್ಥಾನಗಳು ಖಾಲಿ ಹೋಗುತ್ತಿವೆ ಎಂದು ಹೇಳಿದರು. ಆದರೆ, ಡಿಮ್ಯಾಂಡ್ ಇರುವುದು ಕೆಲವಕ್ಕೆ ಮಾತ್ರ, ಅಲ್ಲಿ ಯಾವುದೂ ಖಾಲಿ ಹೋಗುತ್ತಿಲ್ಲ. ಯಾವ ಇಂಜಿನೀಯರಿಂಗ್ ಕೋರ್ಸ್ ಗಳಿಗೆ ಡಿಮ್ಯಾಂಟ್ ಇಲ್ಲ ಅವು ಖಾಲಿ ಹೋಗುತ್ತಿರಬಹುದು. ಆದರೆ ಇದೆಲ್ಲಾ ನಡೆಯುತ್ತಿರುವುದು ಪ್ರವೇಶ ಪರೀಕ್ಷೆಯಲ್ಲಿ ಪರೀಕ್ಷೆಗೆ ಮೊದಲೇ ಸೀಟುಗಳು ನಿಗದಿಯಗಿರುತ್ತವೆ. ಆ ಬಗ್ಗೆ ಮಾನ್ಯ ಸಚಿವರು ಯಾವ ಉತ್ತರವನ್ನೂ ಕೊಡದಿರುವುದು ದುರದೃಷ್ಟಕರ. ನಿಮ್ಮ ಬಗ್ಗೆ ಆಗಲಿ ಡಾ: ಆಚಾರ್ಯರ ಬಗ್ಗೆ ಆಗಲಿ ಗೌರವವಿದೆ. ನೀವು ಇಲ್ಲಿ ವಿರೋಧ ಪಕ್ಷದಲ್ಲಿ ಕುಳಿತಿದ್ದಾಗ ಇದೇ ವಿಚಾರದ ಬಗ್ಗೆ ಸುದೀರ್ಘವಾದ ವಿದ್ಯಾರ್ಥಿಗಳಿಗೆ ಯಾವ ರೀತಿ ಅನ್ಯಾಯ ವಾಗುತ್ತಿದೆ ಎಂದು ತಾವು ಮಾತನಾಡಿರುವುದು ನಮಗೆ ಜ್ಞಾಪಕನೂ ಇದೆ.

ಇವತ್ತು ನಮ್ಮ ರಾಜ್ಯದಲ್ಲಿ ಡಾಕ್ಟರ್‌ಗಳಿರಬಹುದು, ಇಂಜಿನಿಯರ್ಸ್ ಇರಬಹುದು, ಅದರಲ್ಲಿ ಹೊರ ರಾಜ್ಯ, ಹೊರ ದೇಶದವರು ಎಷ್ಟು ಜನರಾಗುತ್ತಿದ್ದಾರೆನ್ನುವುದನ್ನು ನೋಡಿದರೆ ವಾಸ್ತವಾಂಶ ನಮಗೆ ಗೊತ್ತಾಗುತ್ತದೆ. ಈ ಎಲ್ಲಾ ವಿಚಾರಗಳು ನಿಮಗೆ ಚೆನ್ನಾಗಿ ಗೊತ್ತಿದೆ. ಏಕೆಂದರೆ, ಅವರೂ ಕೂಡ ಈ ವಿಚಾರದ ಬಗ್ಗೆ ಕಾಳಜಿ ಇರುವವರು ಎಂದು ನಮಗೂ ಗೊತ್ತಿದೆ. ಆದರೂ ಕೂಡ ತಾವು ತಮ್ಮ ಇಚ್ಛಾಶಕ್ತಿಯನ್ನು ನಿಯಂತ್ರಣ ಮಾಡಲು ಪ್ರದರ್ಶನ ಮಾಡುತ್ತಿಲ್ಲವೆನ್ನುವುದು ಬಹಳ ದುಃಖದ ವಿಚಾರ. ತಾವು, ಮಾನ್ಯ ಸಚಿವರು ವಿದ್ಯಾರ್ಥಿಗಳ ಒಂದು ಮೂವ್‌ಮೆಂಟ್‌ನಿಂದ ಬಂದವರಾಗಿ, ಇವತ್ತು ಸರ್ಕಾರ ನಿಜವಾಗಿ ಒಂದು ಬದ್ಧತೆಯನ್ನು ಪ್ರದರ್ಶನ ಮಾಡಿದರೆ, ಸನ್ಮಾನ್ಯ ವೀರಪ್ಪ ಮೊಯ್ಲಿಯವರು ಇದಕ್ಕೆ ಒಂದು ಕಡಿವಾಣ ಹಾಕುವಂಥ ಕೆಲಸವನ್ನು ಮಾಡಿದ್ದರು, ಅದಾದ ನಂತರ ಇವತ್ತು ತಾವು ಪಕ್ವಾತೀತವಾಗಿ, ಎಲ್ಲಾ ಸರ್ಕಾರಗಳಲ್ಲಿ ಮ್ಯಾನೇಜ್‌ಮೆಂಟ್ ಕೈ ಮೇಲಾಗುತ್ತಾ ಬರುತ್ತಿದೆ. ದಯವಿಟ್ಟು, ಸುಪ್ರೀಂ ಕೋರ್ಟಿನ ರೂಲಿಂಗ್ ಪ್ರಕಾರವೇ, ಅವರು ಯಾವ ರೀತಿ ಪಾರದರ್ಶಕವಾಗಿ ಪರೀಕ್ಷೆ ಮಾಡಬೇಕೆಂದು ಹೇಳಿದ್ದಾರೆ, ಆ ರೀತಿ ಪರೀಕ್ಷೆ ನಡೆದರೆ ಸಾಕಷ್ಟು ಸಾವಿರಾರು ಮಕ್ಕಳಿಗೆ ನ್ಯಾಯ ಸಿಗುತ್ತದೆ. ಇವತ್ತು ನಿಮಗೆ ಅರ್ಜೆಂಟ್ ಇದೆ ಮಾಡುತ್ತಿದ್ದೀರಿ. ಆದರೆ, ಮಕ್ಕಳಿಗೆ ನ್ಯಾಯ ಕೊಡುವಂಥ ಒಂದು ಸುವರ್ಣಾವಕಾಶವನ್ನು ಕಳೆದುಕೊಳ್ಳುತ್ತಿದ್ದೇವೆ ಎನ್ನುವುದನ್ನು ಬಹಳ ಸ್ಪಷ್ಟವಾಗಿ, ಒತ್ತಾಯ ಪೂರ್ವಕವಾಗಿ ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ನಿಮ್ಮ ಅವಸರದಲ್ಲಿ ಮಕ್ಕಳನ್ನು ಬಲಿ ಕೊಡುವುದು ಬೇಡ ಎಂದು ಮತ್ತೊಮ್ಮೆ ಅಧ್ಯಕ್ಷರ ಮುಖೇನ ಕಳಕಳಿಯ ಪ್ರಾರ್ಥನೆ. Implementation ಅಷ್ಟೆ. ಕೆಲವು ವಿಚಾರಗಳನ್ನು ನಾವು ಇಲ್ಲಿ ಮುಕ್ತವಾಗಿ ಹೇಳುವುದಕ್ಕೆ ನಮಗೆ ಮುಜುಗರ ಆಗುತ್ತದೆ. ಖಾಸಗಿಯವರು ಯಾವ ರೀತಿ ಮ್ಯಾನೇಜ್ ಮಾಡುತ್ತಾರೆಂದು ಗೊತ್ತಿದೆ. ಅದೇ ತರಹ ತ್ರಿ ಸದಸ್ಯರ ಸಮಿತಿ ಉಸ್ತುವಾರಿ ಮಾಡಿದರೆ ಅದರಲ್ಲಿ implementation ಕರಾರುವಕ್ಕಾಗಿ ಆಗುತ್ತಿದೆಯೋ ಇಲ್ಲವೋ ಎನ್ನುವಂಥದ್ದು ಖಚಿತಪಡಿಸಿಕೊಳ್ಳುವುದಕ್ಕೆ ಸಾಧ್ಯ. ಒಬ್ಬನೇ ವ್ಯಕ್ತಿ ಇದ್ದರೆ ದುರುಪಯೋಗ ಆಗಲಿಕ್ಕೆ ಹೆಚ್ಚಿನ ಅವಕಾಶವಿರುತ್ತದೆ. ದಯವಿಟ್ಟು ಎರಡೂ ವಿಚಾರಗಳನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಕಳಕಳಿಯ ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು : ನೀವು ನಾಲ್ಕು ಸಾರಿ ಎದ್ದು ನಿಂತು ಮಾತನಾಡಿದ್ದೀರಿ. ಈ ತರಹ ಆದರೆ ಹೇಗೆ? ನೀವು ಮಾತನಾಡುವಾಗ ನಾವು ಅಡ್ಡ ಬರಲಿಲ್ಲ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಆಯಿತು ಅಧ್ಯಕ್ಷರೆ, ನಾವು ಏನು ಸಲಹೆಗಳನ್ನು ಕೊಟ್ಟಿದ್ದೇವೆ ಅದರಲ್ಲಿ ಒಂದಾದರೂ incorporate ಮಾಡಿದ್ದಾರಾ? ನಾನು ಹೇಳಿದ್ದು ತಪ್ಪು ಇದೆ ಎಂದರೆ ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷ್ಣಬೈರೇಗೌಡರ ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್‌ರವರು ಹೇಳಿರುವುದು ಒಪ್ಪಿಕೊಂಡಿದ್ದೇನೆ. ಅವರ ಭಾವನೆ ಅರ್ಥವಾಗಿದೆ. ಅದನ್ನು ನಾವು ಮಾಡುತ್ತೇವೆ. ಈಗಾಗಲೇ ತಾವು ಏನು ಪ್ರವೇಶ ಪರೀಕ್ಷೆಯಲ್ಲಿ ಅನ್ಯಾಯವಾಗುತ್ತಿದೆ, ತಮಗೆ ಬೇಕಾದ ರೀತಿಯಲ್ಲಿ ಮಾಡುತ್ತಿದ್ದಾರೆಂದು ಹೇಳಿದಿರಿ, ನಮ್ಮ ಸಿಸ್ಟಮ್‌ನಲ್ಲಿ ಒಂದು embed ಮಾಡಿದ್ದೇವೆ. Examination supervision ಒಂದು ಕಮಿಟಿ ಇದೆ. I think it is headed by High Court Judge. ಅದನ್ನೆಲ್ಲಾ ಮಾಡುತ್ತಿದ್ದಾರೆ. ಒಂದು ಸಿಸ್ಟಮ್ ಇದೆ ಆ ಸಿಸ್ಟಮ್ ಅನ್ನು ಇನ್ನಷ್ಟು ಪರಿಣಾಮಕಾರಿಯಾಗಿ ನಾವು ಮಾಡಬೇಕು. ಮಾನ್ಯ ಕೃಷ್ಣ ಬೈರೇಗೌಡರು ಹೇಳಿದರು, ಮ್ಯಾನೇಜ್‌ಮೆಂಟ್ ಅದರ ಪ್ರಭಾವ ಅದೆಲ್ಲವೂ ಕೂಡ ಗೊತ್ತಿದೆ. ಪ್ರತಿ ಸಮಯದಲ್ಲಿ ಅದು ಉಲ್ಲೇಖ ಆಗುತ್ತಿರುತ್ತದೆ. ಇದನ್ನು ಹೊರತುಪಡಿಸಿ ನಾವು ಆ ಪ್ರವೇಶ ಪರೀಕ್ಷೆಗಳಲ್ಲಿ ನಿಜವಾದ ಪ್ರತಿಭಾವನ್ವಿತ ವಿದ್ಯಾಆರ್ಥಿಗಳಿಗೆ ಏನು ಅನ್ಯಾಯವಾಗುತ್ತಿದೆ ಆ ಅನ್ಯಾಯವನ್ನು ತಡೆಯಲಿಕ್ಕೆ ಪ್ರವೇಶ ಪರೀಕ್ಷೆ ಹೆಸರಿನಲ್ಲಿ ಧಂದೆ ಮಾಡುವುದನ್ನು ನಾವು ನಿಲ್ಲಿಸಬೇಕು. ಆ ಧಂದೆ ಮಾಡುವುದನ್ನು ನಿಲ್ಲಿಸುವುದಕ್ಕೆ ಮಾನ್ಯ ಡಿ.ಕೆ. ಶಿವಕುಮಾರ್‌ರವರು ಒಂದು ಸಲಹೆ ಕೊಟ್ಟಿದ್ದಾರೆ, ಇತರೆ ಸದಸ್ಯರು ಸಲಹೆಗಳನ್ನು ಕೊಟ್ಟಿದ್ದಾರೆ. ಆ ಆಧಾರದ ಮೇಲೆ ನಾವು ಖಂಡಿತ ಕ್ರಮ ತೆಗೆದುಕೊಳ್ಳಬೇಕು ತೆಗೆದುಕೊಳ್ಳುತ್ತೇವೆ. ಆದರೆ ಈಗ ಬಂದಿರುವುದು ಬಹಳ ಸೀಮಿತ ಉದ್ದೇಶಕ್ಕೋಸ್ಕರ. ಕಳೆದ ಏಳು ವರ್ಷಗಳಿಂದ 2006–07 ರಿಂದ ಈ ರೀತಿ ನಡೆದುಕೊಂಡು ಬಂದಿದೆ. ನಮ್ಮ ಹುಡುಗರಿಗೆ ಸೀಟ್ ಕೊಡಿಸುವುದರಲ್ಲಿ ಅದು ಉಪಯೋಗವಾಗಿದೆ. ಅದನ್ನು ಮುಂದುವರೆಸುವುದಕ್ಕೆ ಒಂದು ಸೀಮಿತವಾದ ಉದ್ದೇಶದಿಂದ ಬಂದಿದೆ. ನೀವೇನು ಲಾರ್ಜರ್ ಪ್ರಾಸ್ಪೆಕ್ಟ್ ಎಂದು ಹೇಳುತ್ತೀರಿ ಅದನ್ನೂ

ಕೂಡ ಪರಿಶೀಲಿಸುವುದಕ್ಕೆ ಸರ್ಕಾರದ ಕಡೆಯಿಂದ ಅಗತ್ಯ ಕ್ರಮ ತೆಗೆದು ಕೊಳ್ಳುತ್ತೇವೆ. ತಮ್ಮ ಸಲಹೆ ಮೇರೆಗೆ ನಾವು Act ಮಾಡುತ್ತೇವೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಕೇಂದ್ರ ಸರ್ಕಾರವದರು all over India Common Entrance Test ಮಾಡಬೇಕೆಂದು ಹೇಳಿದಾಗ ಸರ್ಕಾರ ಏಕೆ ಅದನ್ನು ಬೇಡವೆಂದು ಹೇಳಿತು? ಕೇಂದ್ರ ಸರ್ಕಾರದವರು ಇವೆಲ್ಲಾ ಅವ್ಯವಹಾರ ತಡೆಯುವುದಕ್ಕಾಗಿ ಕಾಮನ್ ಎಂಟ್ರೆನ್ಸ್ ಟೆಸ್ಟ್ ಮಾಡಬೇಕೆಂದು ತಂದರೆ, ನೀವು ಪ್ರೈವೇಟ್ ಮ್ಯಾನೇಜ್ ಮೆಂಟ್‌ನವರ ಪರವಾಗಿ ರಾಜ್ಯ ಸರ್ಕಾರದವರು ಇದನ್ನು ಮಾಡುವುದು ಬೇಡವೆಂದು ಹೇಳಿದ್ದೀರಿ.

ಶ್ರೀ ಡಿ.ಕೆ. ಶಿವಕುಮಾರ್ : Common Entrance Exam ಆಯಿತು ಎಂದರೆ All India level ನಮ್ಮ ರಾಜ್ಯಕ್ಕೆ ಏನು ಷೇರು ಸಿಗುತ್ತಿದೆ, ಆ ಷೇರ್ ನಮಗೆ ಸಿಗುವುದಿಲ್ಲ. When CET is there ನಮ್ಮ ಹುಡುಗರಿಗೆ ಹೆಚ್ಚಿನ ಅವಕಾಶಗಳಿವೆ. All India level ಬಂದಿತು ಎಂದರೆ, All India ದವರೆಲ್ಲಾ ಇಲ್ಲಿ ಬಂದು ಕುಳಿತುಕೊಳ್ಳುತ್ತಾರೆ. ಮೊರಾರ್ಜಿ ಶಾಲೆ ತೆಗೆದಿದ್ದೀರಿ, ಬೀದರ್ ಗುಲ್ಬರ್ಗದವರು ಬಂದು ನಮ್ಮ ಕನಕಪುರದಲ್ಲಿ ಸೇರಿಕೊಳ್ಳುತ್ತಾರೆ. ನಮ್ಮ ಹುಡುಗರಿಗೆ ಸೀಟ್ ಇಲ್ಲ. GTTC ತಂದಿದ್ದೀರಿ ನಮ್ಮ ತಾಲ್ಲೂಕಿನ ಹುಡುಗರಿಗೆ ಅಡ್ಮಿಷನ್ ಸಿಗುತ್ತಿಲ್ಲ. ಎಲ್ಲಾ ಹೊರಗಡೆಯವರು ಬಂದು ಸೇರಿಕೊಳ್ಳುತ್ತಿದ್ದಾರೆ. ಹಾಗಾಗುತ್ತದೆ. ಈಗಿರುವ ಸಿಸ್ಟಮ್, CET is one of the best systems. ಸಧ್ಯಕ್ಕೆ ಅವರನ್ನು ಒಳಗಡೆ ಸೇರಿಸಿಕೊಳ್ಳುವುದು ಬೇಡ.

ಅಧ್ಯಕ್ಷರು : ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆ ಹೀಗಿದೆ :

2012ನೇ ಸಾಲಿನ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕವನ್ನು ಸಭೆಯು ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ.

ಅಧ್ಯಕ್ಷರು : ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 8ರವರೆಗೆ

ಅಧ್ಯಕ್ಷರು : ಖಂಡ 2 ರಿಂದ 8 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ ಎಂಬುದು ಸಭೆಯ ಮುಂದಿರುವ ವಿಷಯ

"ಖಂಡ 2 ರಿಂದ 8 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ.

(ಖಂಡ 2 ರಿಂದ 8 ರವರೆಗೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಮೊದಲನೆ ಖಂಡ ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಬೇಕೆಂದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ

(ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗವಾಗಿವೆ.)

ಅಧ್ಯಕ್ಷರು : ಮಾನ್ಯ ಮುಖ್ಯ ಮಂತ್ರಿಗಳು ಅಂಗೀಕಾರ ಪ್ರಸ್ತಾವವನ್ನು ಮಂಡಿಸಬೇಕು.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, 2012ನೇ ಸಾಲಿನ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವದ ಅಂಗೀಕಾರ

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಗಿದೆ.
ಈಗ ಅದನ್ನು ಸಭೆಯ ಮತಕ್ಕೆ ಹಾಕುತ್ತೇನೆ.

2012ನೇ ಸಾಲಿನ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ. ವಿಧೇಯಕಕ್ಕೆ ಅನುಮೋದನೆ ದೊರಕಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು : ಈಗ ಸದನವನ್ನು 3.45 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸಭೆಯು 2.48ಕ್ಕೆ ಮುಕ್ತಾಯವಾಗಿ ಪುನಃ 3.45 ಕ್ಕೆ ಸೇರುವಂತೆ ನಿರ್ಧರಿಸಿತು)